17 September 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com

**ಭಾವನಾಂತರಂಗ**

ಒಬ್ಬರ ನಗುವಿನ ಹಿಂದಿರುವ ನೋವನ್ನು ತಿಳಿದು ಅವರಿಗೆ ಮತ್ತದೇ ರೀತಿಯ ನೋವು ಕೊಡಬಾರದು!

-ಸ್ನೇಹಾ ಆನಂದ್


ನಮ್ಮದು ಮುಸ್ಲಿಂ ವಿರೋಧಿ ಹೋರಟವಲ್ಲ: ಸಂಸದ ಯದುವೀರ ಒಡೆಯರ್ ಪುಟ ಸಂ. 2


ನಾಡಿನ ಎಲ್ಲಾ ಕ್ಷೇತ್ರದಲ್ಲೂ ಪ್ರಭಾವ ಬೀರಿದ ಕವಿ ಕುವೆಂಪು ಪುಟ ಸಂ. 3


ಪ್ರಯಾಣಿಕರ ದಟ್ಟಣೆ, ಅವಶ್ಯಕತೆಗೆ ತಕ್ಕಂತೆ ಬಸ್ ಸೌಲಭ್ಯ ಕಲ್ಪಿಸಿ: ಕೆ.ರಾಜು ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 222 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ನಟ ಅನಂತನಾಗ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಗರಿ

**ಬೆಂಗಳೂರು:** ಭಾರತೀಯ ಚಿತ್ರರಂ ಗದ ಅತ್ಯುನ್ನತ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಗೆ ಕನ್ನಡದ ಹಿರಿಯ ನಟ ಅನಂತನಾಗ್ ಭಾಜನ ರಾಗಿದ್ದಾರೆ. ಡಾ.ರಾಜ ಕುಮಾರ್ ಅವರ ನಂತರ ಕನ್ನಡಕ್ಕೆ ಮತ್ತೊಮ್ಮೆ ಫಾಲ್ಕೆ ಪ್ರಶಸ್ತಿ ಗರಿ ಮೂಡಿದೆ.

2024ನೇ ಸಾಲಿನ ಈ ಗೌರವಕ್ಕೆ ಅನಂತನಾಗ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿ ವಾಲಯ ಘೋಷಿಸಿದೆ.

ಐದು ದಶಕಗಳಿಗೂ ಹೆಚ್ಚು ಕಾಲ ಚಿತ್ರ ರಂಗ ದಲ್ಲಿ ಸಕ್ರಿಯರಾಗಿರುವ ಅನಂತನಾಗ್ ಅವರು ಕನ್ನಡ, ಹಿಂದಿ, ಮರಾಠಿ ಸೇರಿ ದಂತೆ ಹಲವು ಭಾಷೆಗಳ 300ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿ ದ್ದಾರೆ.

ಕಲಾತ್ಮಕ ಮತ್ತು ವಾಣಿಜ್ಯ ಮಾದರಿಯ ಚಿತ್ರಗಳಲ್ಲಿ ತಮ್ಮ ನೈಜ ಅಭಿನಯದ



ಮೂಲಕ ಕೋಟ್ಯಂ ತರ ಅಭಿ ಮಾನಿಗಳ ಮನ ಗೆದ್ದಿರುವ ಅವ ರಿಗೆ ಪ್ರಶಸ್ತಿ ಒಲಿದಿರುವುದು ಕನ್ನಡ ಚಿತ್ರರಂಗಕ್ಕೆ ದೊರೆತ ಹೆಮ್ಮೆಯಾಗಿದೆ.




### ಸೆ.22ಕ್ಕೆ ಪ್ರಶಸ್ತಿ ಪ್ರದಾನ

ಗುಜರಾತ್ ಏಕತಾ ನಗರದಲ್ಲಿ ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನಂತನಾಗ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

**ಪ್ರಧಾನಿ ಮೋದಿ ಅಭಿನಂದನೆ:** ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾದ ಅನಂತ ನಾಗ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ತಿಳಿಸಿ ದ್ದಾರೆ. ದಶಕಗಳ ಕಾಲ ತಮ್ಮ ಸಹಜ ಅಭಿ ನಯ, ಅದ್ಭುತ ಬಹುಮುಖಿ ಪ್ರತಿಭೆ ಮತ್ತು ಮೇಧಾವಿತನದ ಮೂಲಕ ಅವರು ಭಾರತೀಯ ಚಲನಚಿತ್ರರಂಗದ ಮೇಲೆ, ವಿಶೇಷವಾಗಿ ಕನ್ನಡ ಚಿತ್ರರಂಗದ ಮೇಲೆ ಅಳಿಸಲಾಗದ ಛಾಪು ಮೂಡಿಸಿದ್ದಾರೆ. ಅವರು ನಿರ್ವಹಿಸಿದ ಪ್ರತಿಯೊಂದು ಪಾತ್ರಕ್ಕೂ ಅಪರೂಪದ ಆಳ ಹಾಗೂ ನೈಜತೆಯನ್ನು ತಂದುಕೊಟ್ಟಿದ್ದಾರೆ. ನಿಜಕ್ಕೂ ಅತ್ಯುನ್ನತ ಕಲಾವಿದರೊಬ್ಬರಿಗೆ ಸಂದಿರುವ ಅತ್ಯಂತ ಸೂಕ್ತವಾದ ಗೌರವ ಇದು ಎಂದು ಮೋದಿ ಬಣ್ಣಿಸಿದ್ದಾರೆ.

## ಭೀಕರ ಅಪಘಾತ: ನವದಂಪತಿ ಸಾವು

**ತುಮಕೂರು:** ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ನವ ದಂಪತಿ ಸಾವನ್ನಪ್ಪಿರುವ ಘಟನೆ ಶಿರಾ ತಾಲೂಕಿನ ದ್ವಾರಾಳು ಸೇತುವೆ ಮೇಲೆ ನಡೆದಿದೆ. ದರ್ಶನ್ (25), ಉಷಾರಾಣಿ (21) ಮೃತ ದಂಪತಿ.



ಶಿರಾ ತಾಲೂಕಿನ ಹುಣಸೇಕಟ್ಟೆ ಗ್ರಾಮದ ದಂಪತಿ ಒಂದೂವರೆ ತಿಂಗಳ ಹಿಂದಷ್ಟೇ ವಿವಾಹವಾಗಿದ್ದರು. ಮಂಗಳವಾರ ಬೈಕ್‌ನಲ್ಲಿ ಬೆಂಗಳೂರು ಮಾರ್ಗದತ್ತ ತೆರಳುತ್ತಿದ್ದ ವೇಳೆ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಅಪಘಾತದಿಂದ ದರ್ಶನ್ ಸ್ಥಳದಲ್ಲೇ ಮೃತಪಟ್ಟರು. ಉಷಾರಾಣಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾವೇರಿ: 3 ಸಾವಿರ ಕ್ಯೂಸೆಕ್‌ಗೆ ಇಳಿಸಲು ಮನವಿ

**ನವದೆಹಲಿ:** ತಮಿಳುನಾಡಿಗೆ ಕಾವೇರಿ ನೀರಿನ ಬಿಡುಗಡೆ ಪ್ರಮಾಣವನ್ನು ಪ್ರತಿದಿನ 6 ಸಾವಿರ ಕ್ಯುಸೆಕ್‌ಗಳಿಂದ 3 ಸಾವಿರ ಕ್ಯೂಸೆಕ್‌ಗಳಿಗೆ ಇಳಿಸಲು ಕೂಡಲೇ ಆದೇಶ ಹೊರಡಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಕರ್ನಾಟಕ ಮೇಲ್ಮನವಿ ಸಲ್ಲಿಸಿದೆ.



ತಮಿಳುನಾಡಿಗೆ ಪ್ರತಿದಿನ 6 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಶಿಫಾರಸು ಮಾಡಿದೆ. 15 ದಿನಗಳ ಕಾಲ ನೀರು ಹರಿಸಬೇಕು. ದಿನಕ್ಕೆ ಅರ್ಧ ಟಿಎಂಸಿ ಅಡಿಯಂತೆ ಒಟ್ಟು 7.8 ಟಿಎಂಸಿ ಅಡಿ ನೀರು ಬಿಡಬೇಕಿದೆ ಎಂದು ಸಿಡಬ್ಲ್ಯುಆರ್‌ಸಿ ಹೇಳಿತ್ತು.

ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸು ಎತ್ತಿ ಹಿಡಿದಿದ್ದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತಮಿಳುನಾಡಿಗೆ ಪ್ರತಿದಿನ 6 ಸಾವಿರ ಕ್ಯುಸೆಕ್ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಿತ್ತು.

# ಕೃಷಿ ಸಾಲ ಅವಧಿ ವಿಸ್ತರಣೆ

## ಬರಪೀಡಿತ ತಾಲ್ಲೂಕುಗಳ ಸಾಲ ವಸೂಲಿ 12 ತಿಂಗಳು ವಿಸ್ತರಣೆ

**ಬೆಂಗಳೂರು:** ಕೃಷಿ ಮತ್ತು ಕೃಷಿ ಸಂಬಂಧಿತ ಸಾಲ ಮರುಪಾವತಿಗೆ ಬ್ಯಾಂಕರ್‌ಗಳ ರಾಜ್ಯ ಮಟ್ಟದ ಸಮಿತಿ (ಎಸ್‌ಎಲ್‌ಬಿಸಿ) ವಿಶೇಷ ಪರಿಹಾರ ಯೋಜನೆ ಪ್ರಕಟಿಸಿದೆ.

ರಾಜ್ಯದಲ್ಲಿ ಬರಪೀಡಿತ ತಾಲೂಕುಗಳ ರೈತರ ಸಾಲ ಮರುಪಾವತಿಗೆ 12 ತಿಂಗಳ ಕಾಲಾವಕಾಶ (ಮೊರಟೋರಿಯಂ) ನೀಡುವ ಜೊತೆಗೆ, ಒಟ್ಟು ಸಾಲ ಮರುಪಾವತಿ ಅವಧಿಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿ ಈ ಪ್ರಮುಖ ನಿರ್ಧಾರ ಕೈಗೊಳ್ಳಲಾಗಿದೆ.

ರಾಜ್ಯದ 24 ಜಿಲ್ಲೆಗಳ ಒಟ್ಟು 101 ತಾಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಿಸಿದೆ. ಇದರಲ್ಲಿ 89 ತಾಲೂಕುಗಳನ್ನು ತೀವ್ರ ಬರಪೀಡಿತ ಹಾಗೂ 12 ತಾಲೂಕುಗಳನ್ನು ಸಾಧಾರಣ ಬರಪೀಡಿತ ಎಂದು ವರ್ಗೀಕರಿಸಲಾಗಿದೆ.

ಕಿಸಾನ್ ಕ್ರೆಡಿಟ್ ಕಾರ್ಡ್, ಕೃಷಿ ಸಾಲಗಳು, ಹೈನುಗಾರಿಕೆ, ರೇಷ್ಮೆ ಹಾಗೂ ಮೀನುಗಾರಿಕೆ ಸೇರಿದಂತೆ ಇತರ ಕೃಷಿ ಸಂಬಂಧಿತ ಸಾಲಗಳಿಗೆ 12 ತಿಂಗಳ ಮೊರಟೋರಿಯಂ ನೀಡಲಾಗುತ್ತದೆ. ಪುಟ 2ಕ್ಕೆ



### ಬಲವಂತದ ವಸೂಲಿ ನಿಷೇಧ

ರೈತರಿಂದ ಈ ವರ್ಷ ಯಾವುದೇ ರೀತಿಯ ಬಲವಂತದ ಸಾಲ ವಸೂಲಾತಿ ಮಾಡದಂತೆ ಕಟ್ಟುನಿಟ್ಟಿನ 'ಝೀರೋ ಟಾಲರೆನ್ಸ್' ನೀತಿಯನ್ನು ಜಾರಿಗೆ ತರಲಾಗಿದೆ. ರೈತರಿಂದ ಬರುವ ದೂರುಗಳಿಗೆ ಜಿಲ್ಲಾಡಳಿತ ತಕ್ಷಣವೇ ಸ್ಪಂದಿಸಬೇಕು ಮತ್ತು ಯಾವುದೇ ವಸೂಲಿ ಪ್ರಕ್ರಿಯೆಗೂ ಮುನ್ನ ಬ್ಯಾಂಕುಗಳನ್ನು ಸಂಪರ್ಕಿಸಬೇಕು ಎಂದು ಸೂಚಿಸಲಾಗಿದೆ.ಜಿಲ್ಲಾಧಿಕಾರಿಗಳು, ಸಿಇಒಗಳು ಮತ್ತು ಜಿಲ್ಲಾ ಪ್ರಮುಖ ಬ್ಯಾಂಕ್ ವ್ಯವಸ್ಥಾಪಕರ ಜೊತೆಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ದುರಂತ ನಿರ್ವಹಣೆ ಇಲಾಖೆಗಳ ಕಾರ್ಯದರ್ಶಿಗಳು ವೀಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ರೈತರಿಗೆ ಯೋಜನೆಗಳ ಮಾಹಿತಿ ತಲುಪಿಸಲಿದ್ದಾರೆ ಎಂದು ಮುಖ್ಯ ಕಾರ್ಯದರ್ಶಿ ತಿಳಿಸಿದರು.

## ಅ.17ರಂದು ಕಾವೇರಿ ತೀರ್ಥೋದ್ಭವ

**ಕೊಡಗು:** ಕಾವೇರಿ ತೀರ್ಥೋದ್ಭವ ಅಕ್ಟೋಬರ್ 17ರಂದು ರಾತ್ರಿ 7:50ಕ್ಕೆ ನಡೆಯಲಿದೆ ಎಂದು ಸಮಯ ನಿಗದಿಪಡಿಸಲಾಗಿದೆ. ಮಡಿಕೇರಿ ತಾಲ್ಲೂಕಿನ ತಲಕಾವೇರಿ ಕ್ಷೇತ್ರದಲ್ಲಿ ತೀರ್ಥೋದ್ಭವ ನಡೆಯಲಿದೆ. ಈ ಬಾರಿ ಮೇಷ ಲಗ್ನದಲ್ಲಿ ಕಾವೇರಿ ತೀರ್ಥೋದ್ಭವ ಆಗಲಿದೆ.

ಪವಿತ್ರ ಕಾವೇರಿ ತೀರ್ಥೋದ್ಭವ ಆಚರಣೆಗೆ ಸರ್ಕಾರ 2 ಕೋಟಿ ರೂ. ಅನುದಾನ ನೀಡಲು ನಿರ್ಧರಿಸಿದೆ. ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೊಡಗಿನಲ್ಲಿ ಧಾರ್ಮಿಕ ಸಂಭ್ರಮಾಚರಣೆ ನಡೆಯಲಿದೆ.



### ಕೆರೆ ತುಂಬಿಸಲು ಆದೇಶ

ಕಾವೇರಿ ಕಣಿವೆಯ ಒಟ್ಟು ನೀರಿನಲ್ಲಿ ಶೇ.20ರಷ್ಟನ್ನು ಕುಡಿಯುವ ನೀರಿಗಾಗಿ ಕಾಯ್ದಿರಿಸಬೇಕು. ತುಮಕೂರು, ಬಸರಾಳು, ನಾಗಮಂಗಲ ಭಾಗದ ಕೆರೆಗಳಿಗೆ ಮೂರು ದಿನಕ್ಕೊಮ್ಮೆ ನೀರು ಬಿಡಬೇಕು. ಅಗತ್ಯ ಬಿದ್ದರೆ ಪೊಲೀಸ್ ಭದ್ರತೆಯಲ್ಲಾದರೂ ಕೆರೆ– ಕಟ್ಟೆಗಳನ್ನು ತುಂಬಿಸಬೇಕು ಎಂದು ಸಚಿವ ಚಲುವರಾಯಸ್ವಾಮಿ ಸೂಚನೆ ನೀಡಿದರು.



## ಫೀಲ್ಡಿಗಿಳಿದು ಕೆಲಸ ಮಾಡಲು ಸೂಚನೆ

### ಇಲ್ಲದಿದ್ದರೆ ಶಿಸ್ತು ಕ್ರಮ: ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ಎಚ್ಚರಿಕೆ

**ಬೆಂಗಳೂರು:** ನೀರಾವರಿ ಇಲಾಖೆ ಅಧಿಕಾರಿಗಳು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಲೆಕ್ಕಾಚಾರ ಹಾಕುವ ಬದಲು, ಫೀಲ್ಡಿಗಿಳಿದು ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಇಲ್ಲದಿದ್ದರೆ ಶಿಸ್ತುಕ್ರಮ ಎದುರಿಸ ಬೇಕಾಗುತ್ತದೆ ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಎಚ್ಚರಿಕೆ ನೀಡಿದರು.

ಬುಧವಾರ ಕಾವೇರಿ ನೀರಾವರಿ ನಿಗಮದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು. ಕಾವೇರಿ ನೀರಾವರಿ ನಿಗಮ ವ್ಯಾಪ್ತಿ ಯೋಜ



ನೆಗಳು, ಕುಡಿಯುವ ನೀರಿನ ಸಮಸ್ಯೆ ಹಾಗೂ ಮೇಕೆದಾಟು ಯೋಜನೆ ಕುರಿತಂತೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಕಾರ್ಯೋನ್ಮುಖರಾಗಬೇಕು ಎಂದು ಸೂಚಿಸಿದರು.

ಮೇಕೆದಾಟು ಯೋಜನೆ ಕುರಿತು ಮಾತನಾಡಿದ ಸಚಿವರು, ಕಳೆದ 5 ವರ್ಷಗಳಲ್ಲಿ ತಮಿಳುನಾಡಿಗೆ ಹರಿಸಿದ ಸುಮಾರು 112.88 ಟಿಎಂಸಿ ಹೆಚ್ಚುವರಿ ಕಾವೇರಿ ನೀರು ಸಮುದ್ರ ಪಾಲಾಗಿದೆ. ಹೀಗಾಗಿ ಬರಗಾಲದಲ್ಲೂ ಎರಡು ರಾಜ್ಯಗಳಿಗ

### ಪ್ರತ್ಯೇಕ ಆಯುಕ್ತಾಲಯ

ಕಾವೇರಿ ನೀರಾವರಿ ನಿಗಮದಲ್ಲಿ ಖಾಲಿ ಇರುವ ಶೇ.57ರಷ್ಟು ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದು. ಎಲ್ಲ ನಿಗಮಗಳನ್ನು ಸೇರಿಸಿ ಜಲಸಂಪನ್ಮೂಲ ಸಚಿವರ ನಿಯಂತ್ರಣದಲ್ಲಿ ಆಯುಕ್ತಾಲಯ ರಚಿಸುವ ಅಧಿಕಾರಿಗಳ ಅಭಿಪ್ರಾಯಕ್ಕೂ ಸಚಿವ ಚಲುವರಾಯಸ್ವಾಮಿ ಸಮ್ಮತಿ ಸೂಚಿಸಿದರು.



ಜಲಾಶಯಗಳ ಪುನಶ್ಚೇತನ ಹಾಗೂ ಅಗತ್ಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಪ್ರತ್ಯೇಕ ಸಭೆ ನಡೆಸಿ, ಪರಿಹಾರ ಒದಗಿಸಲು ಕ್ರಮವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

## ಬಡವರಿಗೆ ನಿವೇಶನ: ಭೂಮಿ ಗುರುತಿಸಲು ಪರಂ ಸೂಚನೆ

**ಬೆಂಗಳೂರು:** ಬಡವರಿಗೆ ನಿವೇಶನ ನೀಡುವ ಕಾರ್ಯಕ್ರಮ ಘೋಷಣೆಯಾದ ಬಳಿಕ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.



ನಿವೇಶನಕ್ಕೆ ಭೂಮಿ ಗುರುತಿಸುವ ಪ್ರಕ್ರಿಯೆಯನ್ನು ತಿಂಗಳಾಂತ್ಯದ ವೇಳೆಗೆ ಪೂರ್ಣಗೊಳಿಸಬೇಕು. ಈ ಬಗ್ಗೆ ನಿರ್ಲಕ್ಷಿಸುವುದು ಬೇಡ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು. ಯೋಜನೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದರು.

## ರಾಜ್ಯದಲ್ಲಿ 2 ದಿನ ಅಮಿತ್ ಶಾ ಪ್ರವಾಸ

**ಧಾರವಾಡ:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೆಪ್ಟೆಂಬರ್ 18 ಮತ್ತು 19ರಂದು ರಾಜ್ಯದಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಸೆ.18ರಂದು ರಾತ್ರಿ 10 ಗಂಟೆಗೆ ಹುಬ್ಬಳ್ಳಿಗೆ ಆಗಮಿಸಲಿರುವ ಅಮಿತ್ ಶಾ, ನಗರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುವರು. ಸೆ.19ರಂದು ಬೆಳಿಗ್ಗೆ ಕೆ.ಎಲ್.ಇ ಸಂಸ್ಥೆಯ 1,500 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ಹಾಗೂ ನೂತನ ವೈದ್ಯಕೀಯ ಮಹಾವಿದ್ಯಾಲಯ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮದಲ್ಲಿ ಸೆ.19ರಂದು ಶಾಸಕಿ ಶಶಿಕಲಾ ಜೊಲ್ಲೆ ಒಡೆತನದ ಬೀರೇಶ್ವರ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಕಟ್ಟಡ ಉದ್ಘಾಟಿಸುವರು.

ಸಚಿವ ಸತೀಶ್ ಜಾರಕಿಹೊಳಿ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿ ರಾಜ್ಯ ರಾಜ



ಕೀಯದಲ್ಲಿ ಸಂಚಲನ ಮೂಡಿಸಿರುವ ಬೆನ್ನಲ್ಲೇ ಅಮಿತ್ ಶಾ ಅವರ ಈ ಭೇಟಿ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಈ ಹಿಂದೆ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಜಾರಕಿಹೊಳಿ ಸಹೋದರರು ಮತ್ತು ಜೊಲ್ಲೆ ಕುಟುಂಬ ಒಂದಾಗಿ ಚುನಾವಣೆ ಎದುರಿಸಿದ್ದು, ಜಾರಕಿಹೊಳಿ ಬ್ರದರ್ಸ್ ಬೆಂಬಲದಿಂದಲೇ ಅಣ್ಣಾಸಾಹೇಬ್ ಜೊಲ್ಲೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದರು.

## ಮೈಸೂರಿನಲ್ಲಿ ಅಂತಾರಾಷ್ಟ್ರೀಯ ದರ್ಜೆಯ ಚಿತ್ರನಗರಿ: ಪ್ರಗತಿ ಪರಿಶೀಲನಾ ಸಭೆ

**ಬೆಂಗಳೂರು:** ಮೈಸೂರಿನಲ್ಲಿ ಸಾರ್ವಜನಿಕ–ಖಾಸಗಿ ಪಾಲುದಾರಿಕೆ ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂತಾರಾಷ್ಟ್ರೀಯ ದರ್ಜೆಯ ಚಿತ್ರನಗರಿ ಯೋಜನೆಯ ಪ್ರಗತಿ ಕುರಿತು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಬುಧವಾರ ವಿಕಾಸಸೌಧದ ಸಭಾಂಗಣದಲ್ಲಿ ಸಂಬಂಧಿಸಿದ ಉನ್ನತಾಧಿಕಾರಿಗ ಳೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ಕಲೆ, ಸಂಸ್ಕೃತಿ, ಪರಂಪರೆ ಹಾಗೂ ಪ್ರವಾಸೋದ್ಯಮದ ಪ್ರಮುಖ ತಾಣವಾಗಿರುವ ಮೈಸೂರಿನಲ್ಲಿ ಈ ಮಹತ್ವಾಕಾಂಕ್ಷೆಯ ಚಿತ್ರನಗರಿ ಯೋಜನೆಯು ನಗರದ ಸಾಂಸ್ಕ



ತಿಕ ಮತ್ತು ಆರ್ಥಿಕ ಬೆಳವಣಿಗೆಗೆ ಹೊಸ ವೇಗ ನೀಡಲಿದೆ.

ಈ ಉದ್ದೇಶಿತ ಚಿತ್ರನಗರಿಯನ್ನು ಕೇವಲ ಚಿತ್ರೀಕರಣಕ್ಕೆ ಸೀಮಿತಗೊಳಿಸದೆ, ದೇಶದಲ್ಲೇ ಅತ್ಯುತ್ತಮಮಟ್ಟದ ಅತ್ಯಾಧುನಿಕ ಸ್ಟುಡಿಯೋಗಳು, ತಾಂತ್ರಿಕ ಮೂಲಸೌಕರ್ಯ, ಪೋಸ್ಟ್–ಪ್ರೊಡಕ್ಷನ್ ಸೌಲಭ್ಯಗಳು ಪುಟ 2ಕ್ಕೆ



## ಪೊಲೀಸರ ಕಿರಿಕ್: ಗಣೇಶನನ್ನು ಬೀದಿಯಲ್ಲೇ ಬಿಟ್ಟು ಹೋದರು!

**ಹಾಸನ:** ಗಣಪತಿ ವಿಸರ್ಜನೆ ವೇಳೆ ಧ್ವನಿವರ್ಧಕ ಬಳಕೆಗೆ ಪೊಲೀಸರು ಅನುಮತಿ ನೀಡದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಗಣೇಶನ ಮೆರವಣಿಗೆಯನ್ನು ಅರ್ಧಕ್ಕೆ ನಿಲ್ಲಿಸಿ ತೆರಳಿದ ಘಟನೆ ಸಕಲೇಶಪುರ ತಾಲೂಕಿನ ಮಾರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮಾರನಹಳ್ಳಿ ಗ್ರಾಮದ ಗ್ರಾಮಸ್ಥರು ಗೌರಿ–ಗಣಪತಿಯನ್ನು ಪ್ರತಿಷ್ಠಾಪಿಸಿ ಅದ್ದೂರಿಯಾಗಿ ಮೆರವಣಿಗೆ ಮೂಲಕ ವಿಸರ್ಜನೆ ಮಾಡಲು ತೆರಳುತ್ತಿದ್ದರು.

ಟ್ರಾಕ್ಟರ್‌ನಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಂಡು ಗ್ರಾಮಸ್ಥರು ಮೆರವಣಿಗೆ ನಡೆಸುತ್ತಿದ್ದರು. ಈ ವೇಳೆ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡುವುದಿಲ್ಲ ಎಂದು ಪೊಲೀಸರು ಮೆರವಣಿಗೆಗೆ ಅಡ್ಡಿಪಡಿಸಿದರು.

ಪೊಲೀಸರ ಕ್ರಮಕ್ಕೆ ಕೆರಳಿದ ಗ್ರಾಮಸ್ಥರು ಮೆರವಣಿಗೆಯನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ಬಳಿಕ ನೂರಾರು ಗ್ರಾಮಸ್ಥರು ಸ್ಥಳದಿಂದ ತೆರಳಿದ್ದಾರೆ.

ಇದರಿಂದ ಗೌರಿ–ಗಣಪತಿ ವಿಗ್ರಹವಿದ್ದ ಟ್ರಾಕ್ಟರ್‌ನ್ನು ರಸ್ತೆ ಬದಿಯಲ್ಲೇ ನಿಂತಿತ್ತು. ವಿಗ್ರಹಗಳು ಅನಾಥ ಆದಂತೆ ಇದ್ದವು. ರಸ್ತೆಯಲ್ಲಿ ಗಣೇಶನ ವಿಗ್ರಹವನ್ನು ಅಡ್ಡಿಪಡಿಸಿದ ಪೊಲೀಸರು ಕಾವಲು ಕಾಯುವಂತಾಯಿತು.

## ಮಹಿಳಾ ಸಚಿವೆ ಫೈನಲ್ ಮಾಡದ್ದು ನನ್ನದೇ ತಪ್ಪು!

**ಬೆಂಗಳೂರು:** ನನ್ನ ತಪ್ಪಿನಿಂದ ಸಚಿವ ಸಂಪುಟದಲ್ಲಿ ಮಹಿಳಾ ಮಂತ್ರಿ ಇಲ್ಲ. ದೆಹಲಿಯ ಹೈಕಮಾಂಡ್ ತಪ್ಪಲ್ಲ, ನನ್ನದೇ ತಪ್ಪು. ನಾನೇ ಅಭ್ಯರ್ಥಿಯನ್ನು ಫೈನಲ್ ಮಾಡಲು ಸಾಧ್ಯವಾಗಿಲ್ಲ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದರು.

ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು, ಒಬ್ಬರಿಗಿಂತ ಹೆಚ್ಚು ಆಕಾಂಕ್ಷಿಗಳಿದ್ದರು. ಹೀಗಾಗಿ ಸಾಧ್ಯವಾಗಲಿಲ್ಲ. ಆದರೆ ಮಹಿಳೆಗೆ ಸಚಿವ ಸ್ಥಾನ ನೀಡುವ ಬಗ್ಗೆ ಶೀಘ್ರದಲ್ಲೇ ನಿರ್ಧ



ರಿಸ್ತೇವೆ. ಮಹಿಳಾ ಸಬಲೀಕರಣದ ವಿಚಾರದಲ್ಲಿ ಅತ್ಯಂತ ಗಂಭೀರವಾಗಿದ್ದೇವೆ ಎಂದರು.

ಮೈತ್ರಿ ಸರ್ಕಾರದಲ್ಲಿ ಕುಮಾರಸ್ವಾಮಿ ತಾವೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದರು. ಹೀಗಾಗಿ ಕುಮಾರಸ್ವಾಮಿಗೆ ಮಾತನಾಡುವ ಹಕ್ಕಿಲ್ಲ ಎಂದು ಅವರು ಟೀಕಿಸಿದರು.

ರಾಜ್ಯ ಸರ್ಕಾರ ವಂದೇ ಮಾತರಂಗೆ ಗೌರವ ನೀಡುವ ಕೆಲಸ ಮಾಡಿದೆ. ರಾಷ್ಟ್ರಪತಿ, ರಾಜ್ಯಪಾಲರು, ಪ್ರಧಾನಿ ಬಂದಾಗ ಪೂರ್ಣ ಗೀತೆ ಹಾಡಲಾಗುತ್ತದೆ. ವಂದೇ ಮಾತರಂ ಹಾಡುವುದಿಲ್ಲ ಎಂದು ಯಾರೂ ಹೇಳಿಲ್ಲ ಎಂದು ಹೇಳಿದರು.

## ಯುಪಿಐಗೆ ಸುಂಕ: ಕಾಂಗ್ರೆಸ್ ಆಕ್ರೋಶ

ಯುಪಿಐ ಹಣ ವರ್ಗಾವಣೆ ಮೇಲೆ ಸುಂಕ ವಿಧಿಸಿರುವ ಕೇಂದ್ರ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದ ರಣದೀಪ್ ಸಿಂಗ್ ಸುರ್ಜೇವಾಲಾ, ಇದು ದೇಶದ ಜನರಿಗೆ ಮಾಡಿದ ಮೋಸ. ಬಡವರು, ಮಧ್ಯಮವರ್ಗ ಸೇರಿ ಎಲ್ಲರ ಮೇಲೂ ಇದರ ಪರಿಣಾಮ ಆಗಲಿದೆ. ಕೇಂದ್ರದ ಬಿಜೆಪಿ ಸರ್ಕಾರ ಅಮೆರಿಕ ಕಂಪನಿಗಳಿಗೆ ಸರೆಂಡರ್ ಆಗಿದೆ ಎಂದು ಕಿಡಿಕಾರಿದರು. ಪುಟ 2ಕ್ಕೆ

# ಕೆರೆ,ಕಟ್ಟೆಗಳಿ ನೀರು ಬಿಡದಿದ್ದರೆ ಮುತ್ತಿಗೆ: ಸಾ.ರಾ.



ಮೈಸೂರು: ತಾಲ್ಲೂಕಿನ ಕೆರೆ, ಕಟ್ಟೆಗಳಿಗೆ ನೀರು ಹರಿಸದೇ ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ. ಇದನ್ನು ವಿರೋಧಿಸಿ ನೀರಾವರಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ನೀರಾವರಿ ಇಲಾಖೆಯಿಂದ ನಮ್ಮ ತಾಲ್ಲೂಕಿಗೆ ಒಂದು ರೂಪಾಯಿ ಅನುದಾನ ಬಂದಿಲ್ಲ. ತಾಲ್ಲೂಕಿನಲ್ಲಿ ಬರಗಾಲವಿದ್ದರೂ ತಾಲ್ಲೂಕಿನ ಕೆರೆ, ಕಟ್ಟೆಗಳಿಗೆ ರಾಜ್ಯ ಸರ್ಕಾರ ನೀರು ಬಿಡುವ ಕೆಲಸ ಮಾಡುತ್ತಿಲ್ಲ. ಇದನ್ನು ವಿರೋಧಿಸಿ ಶೀಘ್ರ ನೀರಾವರಿ ಕಚೇರಿಗೆ ಜನರೊಂದಿಗೆ ಮುತ್ತಿಗೆ ಹಾಕಿ ಕೆರೆ, ಕಟ್ಟೆಗಳಿಗೆ ನೀರು ಹರಿಸುವಂತೆ ಆಗ್ರಹಿಸಲಾಗುವುದು ಎಂದು ಹೇಳಿದರು.

ಹಾಸನದಿಂದ ಬಿಳಿಕೆರೆವರೆಗೆ ಕೇಂದ್ರ ಸರ್ಕಾರದಿಂದ ನಾಲ್ಕು ಪಥ ರಸ್ತೆಗಾಗಿ ಈಗಾಗಲೇ ನಾಲ್ಕನೇ ಹಂತದ ಕಾಮಗಾರಿ ನಡೆಯುತ್ತಿದೆ. ಹೀಗಿರುವಾಗ ಐದನೇ ಹಂತದ ಕಾಮಗಾರಿಗೆ ಸರ್ಕಾರ ಮುಂದಾಗಿದೆ. ಆದರೆ, 4ನೇ ಹಂತ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಐದನೇ ಹಂತದ ಕಾಮಗಾರಿ ಮಾಡುವುದು ಎಷ್ಟು ಸರಿ. ಕೇಂದ್ರ ಸರ್ಕಾರ ಭೂಮಿ ವಶಕ್ಕೆ ಅನುದಾನ ನೀಡುತ್ತಿದ್ದರೂ ರಾಜ್ಯ ಸರ್ಕಾರ ಭೂಮಿ ಒದಗಿಸಿಕೊಡುವಲ್ಲಿ ಸತಾಯಿಸುತ್ತಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ವಿಶೇಷ ಅನುದಾನದಡಿಯಲ್ಲಿ 23ಕೋಟಿಯನ್ನು ನೀಡಿದ್ದಾರೆ. ಅದರ ಜಾರಿಗೂ ರಾಜ್ಯ ಸರ್ಕಾರ ಹಿಂದೇಟು ಹಾಕಿ ವಿಳಂಬ ಮಾಡುತ್ತಿದೆ ಎಂದರು.

ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿದೆ. ಎಂಸಿಡಿಸಿಸಿ ಬ್ಯಾಂಕ್ ನ ಈಗಿನ ಅಧ್ಯಕ್ಷರು ಸಾಲ ಮರುಪಾವತಿಸಿದ ರೈತರಿಗೂ ಮರಳಿ ಸಾಲ ನೀಡುತ್ತಿಲ್ಲ. ಅದೇ ರೀತಿಯಲ್ಲಿ ಎಚ್.ಡಿ.ಕೋಟೆ ಸಹಕಾರ ಸಂಘದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಿಂತಿದ್ದವರನ್ನೇ ವಜಾಗೊಳಿಸಿ ರಾಜಕೀಯ ಮಾಡುತ್ತಿದ್ದಾರೆ. ಎಂಸಿಡಿಸಿಸಿ ನೂತನ ಅಧ್ಯಕ್ಷರಿಂದ ರೈತರಿಗೆ ಅನಾನುಕೂಲವೇ ಹೆಚ್ಚಾಗಿದೆ ಎಂದರು.

ಇನ್ಸ್ ಪೆಕ್ಟರ್ ಧನಂಜಯ್ ಸರ್ಕಾರಿ ನೌಕರರು, ಅವರು ಎಚ್ಚರಿಕೆ ಕೊಡುವ ಸಂದರ್ಭದಲ್ಲಿ ಭಾಷೆ ಮೇಲೆ ಹಿಡಿಯಿಟ್ಟುಕೊಳ್ಳಬೇಕಿತ್ತು, ಹಿಡಿತ ಇಟ್ಟುಕೊಳ್ಳದಿರುವುದು ಇಂತಹ ಘಟನೆಗೆ ಕಾರಣವಾಗಿದೆ. ಮಾಜಿ ಸಂಸದ ಪ್ರತಾಪ್ ಸಿಂಹ ಕೂಡ ಮಾತನಾಡಿರುವುದು ಸರಿಯಿಲ್ಲ, ನಾನು ಈ ಘಟನೆ ಸಂಬಂಧ ಯಾರನ್ನು ವಹಿಸಿಕೊಳ್ಳಲ್ಲ, ಸರ್ವಧರ್ಮದ ಶಾಂತಿಯ ತೋಟದಲ್ಲಿ ಕಾನೂನಿನಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರು. ಸೆ.18 ರಂದು ಬಿಜೆಪಿ ನಡೆಸುವ ಶೋಭಾ ಯಾತ್ರೆಗೆ ಜೆಡಿಎಸ್ ಪಾಲ್ಗೊಳ್ಳುವುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಾ.ರಾ.ಮಹೇಶ್, ಶೋಭಾ ಯಾತ್ರೆ ಯಾವುದೂ ನಮಗೆ ಗೊತ್ತಿಲ್ಲ ಎಂದು ಹೇಳಿದರು. ತಿ.ನರಸೀಪುರ ಮಾಜಿ ಶಾಸಕ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಅಶ್ವಿನ್ ಕುಮಾರ್ ಮಾತನಾಡಿ, ಇದು ಟಿ.ನರಸೀಪುರ ವಿಚಾರ ಬಂದರೂ ಲಿಂಕ್ ರಸ್ತೆ ಎಂದು ಏನು ಹೇಳಿದ್ದಾರೆ ಅದು ವರುಣಾ ಕ್ಷೇತ್ರಕ್ಕೆ ಬರಲಿದೆ. ಆದರೂ ಪೊಲೀಸ್ ಅಧಿಕಾರಿ ಸಣ್ಣ ಮಾತು ಇಷ್ಟು ದೊಡ್ಡದಾಗಲು ಕಾರಣವಾಗಿದೆ. ತಿ.ನರಸೀಪುರದಲ್ಲಿ ಎಲ್ಲರೂ ಶಾಂತಿಯಿಂದ ಇದ್ದಾರೆ ಎಂದರು.

# ನೀರು ಹರಿಸುವಲ್ಲಿ ಶಾಸಕರ ವಿಫಲತೆ



ಗುಂಡ್ಲುಪೇಟೆ: ತಾಲೂಕಿನ ನಾಲ್ಲನೇ ಹಂತದ ಕೆರೆಗಳಿಗೆ ಸೆ.6ರಿಂದ ನಿರಂತರವಾಗಿ ನೀರು ಹರಿಸುವುದಾಗಿ ಭರವಸೆ ನೀಡಿದ್ದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ದಿನಾಂಕ ಕಳೆದರೂ ಇದುವರೆಗೆ ನೀರು ಹರಿಸಲು ಸಾಧ್ಯವಾಗಿಲ್ಲ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ತೀವ್ರ ಬರ ಪರಿಸ್ಥಿತಿ ನಡುವೆಯೂ ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಶಾಸಕರು ಸಮರ್ಪಕವಾಗಿ ಅಧಿಕಾರ ಚಲಾಯಿಸದೆ ಅಸಹಾಯಕತೆ ವ್ಯಕ್ತಪಡಿಸುತ್ತಿರುವುದು ದುರಂತ ಎಂದರು.

ಶಾಸಕರು ನಾಲ್ಲನೇ ಹಂತದ ಕೆರೆಗಳಿಗೆ ಸೆ.6ರಿಂದ 100 ದಿನಗಳ ಕಾಲ ನೀರು ಹರಿಸುವುದಾಗಿ ಹೇಳಿ ಸಾಮಾಜಿಕ ಜಾಲತಾಣದಲ್ಲೂ ಪೋಸ್ಟ್ ಮಾಡಿದ್ದರು. ಆದರೆ ಭರವಸೆ ಈಡೇರಿಲ್ಲ, ರೈತ ಸಂಘಟನೆಗಳು ಹಾಗೂ ರೈತರು ಹಲವು ದಿನಗಳಿಂದ ಹೋರಾಟ ನಡೆಸಿದರೂ ಸಮಸ್ಯೆ ಪರಿಹಾರವಾಗಿಲ್ಲ ಎಂದು ದೂರಿದರು.

**ಖನಿಜ ಸಂಪತ್ತು ಸಾಗಣೆ ಬಗ್ಗೆ ಸ್ಪಷ್ಟನೆ ನೀಡಿ**

ತಾಲೂಕಿನಿಂದ ಪ್ರತಿದಿನ ನೂರಾರು ಟಿಪ್ಪರ್‌ಗಳಲ್ಲಿ ಖನಿಜ ಸಂಪತ್ತು ಸಾಗಿಸಲಾಗುತ್ತಿದೆ. ಗಣಿಗಾರಿಕೆ ಹಾಗೂ ರಾಜಧನ ಪಾವತಿ ವಿಚಾರದಲ್ಲಿ ಶಾಸಕರೂ ಸೇರಿದಂತೆ ಕೆಲವರು ನ್ಯಾಯಾಲಯದ ಮೊರೆ ಹೋಗಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಶಾಸಕರು ಜನರಿಗೆ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಮಾತ್ ಎತ್ತಿದಾಗಲ್ಲ ಅಸಹಾಯಕತೆ ಬಗ್ಗೆ ಮಾತನಾಡುವ ಬದಲು ಅಧಿಕಾರವನ್ನು ಸಮರ್ಪಕವಾಗಿ ಬಳಸಿಕೊಂಡು ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅಧಿಕಾರಿಗಳು ಶಾಸಕರ ಮಾತು ಕೇಳುತ್ತಿಲ್ಲ ಎನ್ನುವುದಾದರೆ ರಾಜೀನಾಮೆ ನೀಡಿ ಬನ್ನಿ, ಯಾರು ಸಮರ್ಥರು, ಯಾರು ಅಸಮರ್ಥರು ಎಂಬುದನ್ನು ಜನರೇ ತೀರ್ಮಾನಿಸಲಿ ಎಂದು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಮಹದೇವ ಪ್ರಸಾದ್, ಮಾಜಿ ಅಧ್ಯಕ್ಷ ಎಲ್.ಸುರೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗೇಂದ್ರ, ಪುರಸಭೆ ಮಾಜಿ ಸದಸ್ಯ ನಾಗೇಶ್, ಮಂಚಹಳ್ಳಿ ಲೋಕೇಶ್, ಬಸವರಾಜ್ ಅಗತಗೌಡನಹಳ್ಳಿ, ಉಪಸ್ಥಿತರಿದ್ದರು.

## ಮೊದಲ ಪುಟದಿಂದ

### ಮಾಫಿ ಸಾಕ್ಷಿಗೆ ಕೋರ್ಟ್ ಅಸ್ತು

ಅಕ್ರಮವಾಗಿ ಮೊಬೈಲ್ ಫೋನ್ ಬಳಕೆ ಮಾಡಿದ್ದಾರೆ. ಬೇರೊಬ್ಬರ ಹೆಸರಿನಲ್ಲಿ ನಂಬರ್ ಎಂಟ್ರಿ ಮಾಡಿಸಿ ತನ್ನ ಪತ್ನಿಗೆ ಕರೆ ಮಾಡಿದ್ದಾನೆ. ಜೈಲಾಧಿಕಾರಿಗಳ ಪ್ರಾಥಮಿಕ ತನಿಖೆಯಲ್ಲೂ ಅಕ್ರಮ ಕರೆ ಮಾಡಿರುವುದು ದೃಢಪಟ್ಟಿದೆ. ಜೈಲಿನಿಂದ ಹೊರಬರಲು ಪ್ರದೋಷ್ ಹಲವರ ಜೊತೆ ಸಂಪರ್ಕ ಸಾಧಿಸಿದ್ದಾನೆ. ಆತನ ಮೇಲೆ ಯಾರೋ ಒತ್ತಡ ಹೇರಿರುವ ಸಾಧ್ಯತೆಯಿದೆ. ಈ ಅಕ್ರಮದ ಸಂಪೂರ್ಣ ತನಿಖೆ ಮುಕ್ತಾಯವಾಗುವವರೆಗೂ ಪ್ರದೋಷ್‌ನನ್ನು ಮಾಫಿ ಸಾಕ್ಷಿ ಎಂದು ಪರಿಗಣಿಸಬಾರದು ಎಂದು ಮನವಿ ಮಾಡಿದರು. ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ ಆರೋಪಿ ಪ್ರದೋಷ್ ನ್ಯಾಯಾಧೀಶರ ಮುಂದೆ ಕಣ್ಣೀರಿಟ್ಟಿದ್ದಾನೆ. ಮಹಾಸ್ವಾಮಿ, ಜೈಲು ಅಧಿಕಾರಿಗಳೇ ನನಗೆ ಐಡಿ ಕ್ರಿಯೇಟ್ ಮಾಡಿಕೊಟ್ಟಿದ್ದರು. ನನಗೆ ಯಾವುದೇ ಸಿಸ್ಟಮ್ ಆಕ್ಸೆಸ್ ಇಲ್ಲ. ಮೊದಲು ಇದನ್ನು ಲೀಗಲ್ ಎಂದಿದ್ದ ಅಧಿಕಾರಿಗಳೇ ಈಗ ಇಲ್ಲೀಗಲ್ ಎನ್ನುತ್ತಿದ್ದಾರೆ. ಕಳೆದ 2–3 ದಿನಗಳಿಂದ ನನ್ನನ್ನು ಗುರಿಯಾಗಿಸಿ ಕ್ಯಾಂಟೀನ್ ವ್ಯವಸ್ಥೆ ಕಿತ್ತುಕೊಂಡು, ಒಂದು ತಿಂಗಳು ಸೆಲ್‌ನಲ್ಲಿರಬೇಕು ಮತ್ತು ಕುಟುಂಬಸ್ಥರನ್ನು ಭೇಟಿ ಮಾಡುವಂತಿಲ್ಲ ಎಂದು ಬೆದರಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾನೆ.

### ಕಾಂಗ್ರೆಸ್ ಆಕ್ರೋಶ

**ಯುಪಿಐ ಟ್ರಾನ್ಸಾಕ್ಷನ್ ಮೇಲಿನ ಟ್ಯಾಕ್ಸಿಂದ ಜನರಿಗೆ ಹೊರೆಯಾಗಲಿದೆ. ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ 0.4 ಶುಲ್ಕ ವಿಧಿಸುವುದರಿಂದ ಟ್ರಾನ್ಸಾಕ್ಷನ್ ಟ್ಯಾಕ್ಸ್ ಮುಂದೆ ಎಲ್ಲರಿಗೂ ವಿಸ್ತರಣೆ ಮಾಡುವ ಆತಂಕ ಎದುರಾಗಿದೆ. ಮೋದಿ ಸರ್ಕಾರ ಯುಪಿಐ ಅನ್ನು ಕಲೆಕ್ಷನ್ ಮಷಿನ್ ಆಗಿ ಮಾಡ್ತಿದೆ ಎಂದವರು ವಾಗ್ದಾಳಿ ನಡೆಸಿದರು.**

### ಕೃಷಿ ಸಾಲ ಅವಧಿ ವಿಸ್ತರಣೆ

ಸಾಧಾರಣ ಬರಪೀಡಿತ ತಾಲೂಕುಗಳಲ್ಲಿ ಸಾಲ ಮರುಪಾವತಿ ಅವಧಿಯನ್ನು 3 ವರ್ಷಗಳಿಗೆ ಹಾಗೂ ತೀವ್ರ ಬರಪೀಡಿತ ತಾಲೂಕುಗಳಲ್ಲಿ 60 ತಿಂಗಳಿಗೆ (5 ವರ್ಷ) ವಿಸ್ತರಿಸಲಾಗಿದೆ.

ಹಳೆಯ ಸಾಲ ಮರುಪಾವತಿ ಮುಂದೂಡುವುದು ಮಾತ್ರವಲ್ಲದೆ, ರೈತರ ತುರ್ತು ಅಗತ್ಯಕ್ಕೆ ಅನುಗುಣವಾಗಿ ಬ್ಯಾಂಕುಗಳು ತಮ್ಮ ನಿಯಮಾವಳಿಗಳಂತೆ ಹೊಸ ಸಾಲಗಳನ್ನು ವಿತರಿಸಲಿವೆ. ಸರ್ಕಾರವು ಮುಂದೆ ಮತ್ತೆ ಯಾವುದೇ ಹೊಸ ತಾಲೂಕು ಬರಪೀಡಿತ ಎಂದು ಘೋಷಿಸಿದರೆ, ಈ ಪರಿಹಾರದ ಚೌಕಟ್ಟು ಪ್ರತ್ಯೇಕ ಎಸ್‌ಎಲ್‌ಬಿಸಿ ಸಭೆಯ ಅಗತ್ಯವಿಲ್ಲದೇ ಸ್ವಯಂಚಾಲಿತವಾಗಿ ಅನ್ವಯವಾಗಲಿದೆ. ಈ ಪರಿಹಾರ ಯೋಜನೆಯನ್ನು 2026ರ ಅಕ್ಟೋಬರ್ 11ರೊಳಗೆ ಜಾರಿಗೆ ತರಲಾಗುತ್ತದೆ. ಪರಿಹಾರದ ಸಂಪೂರ್ಣ ಪ್ರಕ್ರಿಯೆಯನ್ನು 2027ರ ಜ.9 ರೊಳಗೆ ಪೂರ್ಣಗೊಳಿಸಲು ಬ್ಯಾಂಕುಗಳಿಗೆ ಸೂಚಿಸಲಾಗಿದೆ.

### ಕೆಲಸ ಮಾಡಲು ಸೂಚನೆ

ಅನುಕೂಲವಾಗುವ ಹಾಗೂ ಕನಿಷ್ಠ 22 ಟಿಎಂಸಿ ಕುಡಿಯುವ ನೀರನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಮೇಕೆದಾಟು ಯೋಜನೆಯೇ ಶಾಶ್ವತ ಪರಿಹಾರವಾಗಿದೆ ಎಂದು ಹೇಳಿದರು. 11 ಜಿಲ್ಲೆಗಳ 34,273 ಚದರ ಕಿ.ಮೀ. ವಿಸ್ತೀರ್ಣದಲ್ಲಿ ವ್ಯಾಪಿಸಿರುವ ಕಾವೇರಿ ಕಣಿವೆಯಲ್ಲಿ ನ್ಯಾಯಾಧಿಕರಣದ ತೀರ್ಪಿನಂತೆ 18.85 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿಯಡಿ 15.55 ಲಕ್ಷ ಎಕರೆ ಹಾಗೂ ಸಣ್ಣ ನೀರಾವರಿಯಡಿ 3.30 ಲಕ್ಷ ಎಕರೆ ಪ್ರದೇಶ ಸೇರಿದೆ. ಈ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು, ಆಧುನೀಕರಣ ಮತ್ತು ನಿರ್ವಹಣೆ ಮಾಡುವುದು ಕಾವೇರಿ ನೀರಾವರಿ ನಿಗಮದ ಮುಖ್ಯ ಉದ್ದೇಶವಾಗಿದೆ. ಮುಖ್ಯಮಂತ್ರಿ ಹಾಗೂ ತಾವೇ ಕಾವೇರಿ ಜಲಾನಯನ ಪ್ರದೇಶದವರಾಗಿರುವುದರಿಂದ ಯಾವುದೇ ಕಾಮಗಾರಿ ಅಪೂರ್ಣವಾಗಬಾರದು ಎಂದು ಎಚ್ಚರಿಸಿದರು.

### ಪ್ರಗತಿ ಪರಿಶೀಲನಾ ಸಭೆ

ಹಾಗೂ ಚಲನಚಿತ್ರ ಕ್ಷೇತ್ರಕ್ಕೆ ಅಗತ್ಯವಿರುವ ಸಮಗ್ರ ವ್ಯವಸ್ಥೆಗಳನ್ನು ಒಳಗೊಂಡಂತೆ ರೂಪಿಸುವ ಕುರಿತು ಸಭೆಯಲ್ಲಿ ವಿವರವಾದ ಚರ್ಚೆ ನಡೆಯಿತು.

**ಸಭೆಯ ಮುಖ್ಯ ಮುಖ್ಯಾಂಶಗಳು** ಕಾಲಮಿತಿ ಹಾಗೂ ಪ್ರಗತಿ: ಯೋಜನೆಯ ಅನುಷ್ಠಾನದಲ್ಲಿ ಯಾವುದೇ ವಿಳಂಬವಾಗದಂತೆ ಪ್ರತಿ ಹಂತದ ಕಾರ್ಯಯೋಜನೆ, ಪ್ರಗತಿ ಹಾಗೂ ಎದುರಾಗಬಹುದಾದ ಸವಾಲುಗಳ ಕುರಿತು ನಿರಂತರವಾಗಿ ಮಾಹಿತಿ ಒದಗಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

**ಗುಣಮಟ್ಟಕ್ಕೆ ಆದ್ಯತೆ** ಸಾರ್ವಜನಿಕ ಹಿತಾಸಕ್ತಿ ಹಾಗೂ ಮೈಸೂರಿನ ಪ್ರವಾಸೋದ್ಯಮ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ಗುಣಮಟ್ಟದೊಂದಿಗೆ ಸಾಕಾರಗೊಳಿಸಲು ನಿರ್ದೇಶನ ನೀಡಲಾಯಿತು

**ಸಮಗ್ರ ಸೌಲಭ್ಯ** ಅಂತಾರಾಷ್ಟ್ರೀಯ ಮಟ್ಟದ ತಾಂತ್ರಿಕತೆ ಮತ್ತು ಪೋಸ್ಟ್-ಪ್ರೊಡಕ್ಷನ್ ಸಾಮರ್ಥ್ಯವನ್ನು ಮೈಸೂರಿನಲ್ಲಿಯೇ ಒದಗಿಸುವ ನಿಟ್ಟಿನಲ್ಲಿ ಯೋಜನೆಗೆ ಚಾಲನೆ ನೀಡಲಾಗಿದೆ.

ಈ ಪರಿಶೀಲನಾ ಸಭೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಜೆ. ಮಂಜುನಾಥ್, ಮೈಸೂರಿನ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಜೆಸಿಂತಾ, ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ್ ಸೇರಿದಂತೆ ಇಲಾಖೆಯ ಹಲವು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಸೆ.22ಕ್ಕೆ ಪ್ರಶಸ್ತಿ ಪ್ರದಾನ

**ಛಾಪು ಮೂಡಿಸಿದ್ದಾರೆ. ಅವರು ನಿರ್ವಹಿಸಿದ ಪ್ರತಿಯೊಂದು ಪಾತ್ರಕ್ಕೂ ಅಪರೂಪದ ಆಳ ಹಾಗೂ ನೈಜತೆಯನ್ನು ತಂದುಕೊಟ್ಟಿದ್ದಾರೆ. ನಿಜಕ್ಕೂ ಅತ್ಯುನ್ನತ ಕಲಾವಿದರೊಬ್ಬರಿಗೆ ಸಂದಿರುವ ಅತ್ಯಂತ ಸೂಕ್ತವಾದ ಗೌರವ ಇದು ಎಂದು ಮೋದಿ ಬಣ್ಣಿಸಿದ್ದಾರೆ.**

### ಅನಂತನಾಗ್‌ಗೆ ದಾದಾಸಾಹೇಬ್

ಮನ ಗೆದ್ದಿರುವ ಅವರಿಗೆ ಪ್ರಶಸ್ತಿ ಒಲಿದಿರುವುದು ಕನ್ನಡ ಚಿತ್ರರಂಗಕ್ಕೆ ದೊರೆತ ಹೆಮ್ಮೆಯಾಗಿದೆ. 1948ರ ಸೆ.4ರಂದು ಅನಂತ್ ನಾಗ್ ಅವರು ಉತ್ತರ ಕನ್ನಡದ ಶಿರಳ್ಳಿಯಲ್ಲಿ ಜನಿಸಿದರು. 1973ರಲ್ಲಿ ಸಂಕಲ್ಪ ಚಿತ್ರದ ಮೂಲಕ ಬೆಳ್ಳಿ ತೆರೆಗೆ ಪದಾರ್ಪಣೆ ಮಾಡಿದರು. ಆನಂತರ ಶ್ಯಾಮ್ ಬೆನಗಲ್ ಅವರ ಅಂಕುರ್, ಬಯಲುದಾರಿ, ನಾ ನಿನ್ನ ಬಿಡಲಾರೆ ಸೇರಿದಂತೆ ಸುಮಾರು 250ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ.

# ಫಾರ್ಮಾಸಿಸ್ಟ್‌ಗಳ ಪಾತ್ರ ಮಹತ್ವದ್ದು

## ಮಹಮದ್ ಮನ್ಸೂರ್ ಅಭಿಮತ । ಪದವಿ ಪ್ರದಾನ ಸಮಾರಂಭ

ರಾಮನಗರ: ಆರೋಗ್ಯ ಮತ್ತು ಚಿಕಿತ್ಸಾ ಕ್ಷೇತ್ರದಲ್ಲಿ ಫಾರ್ಮಾಸಿಸ್ಟ್‌ಗಳ ಪಾತ್ರ ಮಹತ್ವದ್ದು ಎಂದು ವಲಯ ಅರಣ್ಯಾಧಿಕಾರಿ ಮಹಮದ್ ಮನ್ಸೂರ್ ಹೇಳಿದರು.

ನಗರದ ಶ್ರೀ ರಾಮದೇವರ ಬೆಟ್ಟದ ರಸ್ತೆಯಲ್ಲಿರುವ ಎಂ.ಎಂ.ಯು ಕಾಲೇಜ್ ಆಫ್ ಫಾರ್ಮಸಿಯಲ್ಲಿ ಬಿ.ಫಾರ್ಮ ವಿದ್ಯಾಭ್ಯಾಸ ಪೂರೈಸಿದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪದವಿ ಪ್ರದಾನ ಸಮಾರಂಭವನ್ನು ಗಿಡಕ್ಕೆ ನೀರೆರುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

**ನಿರಂತರ ಕಲಿಕೆ ಅಗತ್ಯ – ಸೂರ್ಯ ಪ್ರಕಾಶ್**

ಅತಿಥಿಯಾಗಿ ಭಾಗವಹಿಸಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿ ಪತ್ರಕರ್ತ ಬಿ.ವಿ.ಸೂರ್ಯಪ್ರಕಾಶ್ ಮಾತನಾಡಿ, ಎಂ.ಎಂ.ಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಅನೇಕರು ಉತ್ತಮ ಬದುಕು ಕಟ್ಟಿಕೊಂಡಿದ್ದಾರೆ. ವೃತ್ತಿಪರರಾಗಲು ಸಂಸ್ಥೆ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ವ್ಯಾಸಂಗದ ವೇಳೆ ಸಂಪಾದಿಸಿದ ಜ್ಞಾನದ ಜೊತೆಗೆ ನಿರಂತರ ಕಲಿಕೆಯಿಂದ ಔಷಧ ವಿಜ್ಞಾನದಲ್ಲಿ ಪ್ರಬುದ್ಧತೆಯನ್ನು ಪಡೆಯಬೇಕು ಎಂದು ಕರೆ ನೀಡಿದರು.



### ಅರಣ್ಯ ಇಲಾಖೆವತಿಯಿಂದ ಔಷಧೀಯ ಸಸ್ಯಗಳ ವಿತರಣೆ

**ಅರಣ್ಯ ಇಲಾಖೆಯು ಆಯುಷ್ ಸಂಸ್ಥೆಯ ಮೂಲಕ ನಾಟಿ ವೈದ್ಯರಿಗೆ ಔಷಧೀಯ ಸಸ್ಯಗಳನ್ನು ವಿತರಿಸುತ್ತಿದೆ. ಹಿಂದಿನ ಕಾಲದಲ್ಲಿ ಚಿಕಿತ್ಸೆಗೆ ಔಷಧಗಳನ್ನು ಸಸ್ಯಗಳಿಂದಲೇ ತಯಾರಿಸುತ್ತಿದ್ದರು. ಇಂದಿಗೂ ನಾಟಿ ವೈದ್ಯರು ಔಷಧೀಯ ಸಸ್ಯಗಳನ್ನು ಬಳಸಿ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ವಲಯ ಅರಣ್ಯ ಅಧಿಕಾರಿ ಮಹಮದ್ ಮನ್ಸೂರ್ ಹೇಳಿದರು. ಸಸ್ಯೌಷಧಿ ವಿಚಾರದಲ್ಲಿ ಫಾರ್ಮಸಿ ಮತ್ತು ಅರಣ್ಯ ಇಲಾಖೆಯ ನಡುವೆ ಒಡನಾಟ ಇದೆ ಎಂದರು. ಕೋವಿಡ್ ಸಂದರ್ಭದಲ್ಲಿಯೂ ಔಷಧ ವಿಜ್ಞಾನಿಗಳು ರೋಗ ಹರಡುವುದನ್ನು ತಡೆಗಟ್ಟುವ ವಿಚಾರದಲ್ಲಿ ಲಸಿಕೆಯನ್ನು ಕಂಡು ಹಿಡಿದು ಸಮಾಜವನ್ನು ರಕ್ಷಿಸಿದ್ದಾರೆ. ಫಾರ್ಮಸಿ ಪದವಿಯನ್ನು ಪಡೆದಿರುವ ತಾವುಗಳು ಸಮಾಜಕ್ಕೆ ಒಳಿತಾಗುವಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.**

### ಫಾರ್ಮಸಿ ವೃತ್ತಿ ಉದಾತ್ತ ವೃತ್ತಿ: ಮಹಮದ್ ಖಲೀಲ್

**ಕಾಲೇಜಿನ ನಿರ್ದೇಶಕ ಮಹಮದ್ ಖಲೀಲ್ ಮಾತನಾಡಿ, ನಿಮ್ಮ ಪದವಿಯ ಹಿಂದೆ ಉಪನ್ಯಾಸಕರ ಶ್ರಮವಿದೆ. ಪೋಷಕರು ನಿಮಗೆ ಉತ್ತಮ ಕಾಲೇಜಿನಲ್ಲಿ ಪದವಿ ಪೂರೈಸಲು ನಿಮಗೆ ನೆರವಾಗಿದ್ದಾರೆ. ಹೀಗಾಗಿ ಇಬ್ಬರ ಬಗ್ಗೆಯೂ ನೀವು ಕೃತಜ್ಞರಾಗಿರಬೇಕು ಎಂದರು.**

**ಇಂದು ವಿಶ್ವ ತೀವ್ರಗತಿಯಲ್ಲಿ ಬದಲಾಗುತ್ತಿದೆ. ಆರೋಗ್ಯ, ಚಿಕತ್ಸೆಯ ಕ್ಷೇತ್ರದಲ್ಲೂ ಸಾಕಷ್ಟು ಪ್ರಗತಿಗಳು ಕಾಣುತ್ತಿದ್ದೇವೆ. ಆರೋಗ್ಯ ಕ್ಷೇತ್ರದಲ್ಲಿ ಫಾರ್ಮಾಸಿಸ್ಟ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವೈದ್ಯರು ಮತ್ತು ನರ್ಸ್‌ಗಳು ತಮ್ಮ ವೃತ್ತಿಯನ್ನು ಉದಾತ್ತ ವೃತ್ತಿ ಎನ್ನುತ್ತಾರೆ, ಫಾರ್ಮಸಿ ವೃತ್ತಿಯೂ ಉದಾತ್ತ ವೃತ್ತಿಯಾಗಿದ್ದು, ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದು ಉತ್ತಮ ನಿರ್ಧಾರ ಎಂದರು.**

**ಜ್ಞಾನ ಸಂಪಾದನೆಗೆ ವ್ಯಾಸಂಗ ಮಾಡಿದ್ದು ವೃತ್ತಿಪರ ಪ್ರಮಾಣ ಪತ್ರ ಪಡೆಯಲು. ಆದರೆ ಮುಂದೆ ನೀವೇನು ಮಾಡುತ್ತೀರಿ ಎನ್ನುವುದು ಮುಖ್ಯ. ಇದು ಸ್ಪರ್ಧಾತ್ಮಕ ಜಗತ್ತು. ವೃತ್ತ ಮತ್ತು ಜೀವನದಲ್ಲಿ ಅನೇಕ ಸಮಸ್ಯೆಗಳು, ಅಡೆತಡೆಗಳು, ಸವಾಲುಗಳು ಎದುರಾಗುತ್ತವೆ. ಇಲ್ಲಿ ಪಡೆದ ಜ್ಞಾನ ನಿಮ್ಮನ್ನು ಇಂತಹ ಜಗತ್ತಿಗೆ ಸಜ್ಜುಗೊಳಿಸಿದೆ. ವಾಟ್ಸ್‌ಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಶೇ 80ಕ್ಕಿಂತ ಹೆಚ್ಚು ಮಾಹಿತಿ ಸುಳ್ಳು ಮತ್ತು ನಕಲಿಯದ್ದೇ ಆಗಿದೆ. ಹೀಗಾಗಿ ಇವುಗಳನ್ನು ನಂಬದಿರಿ. ನಿರಂತರವಾಗಿ ಅಧ್ಯಯನ ಮಾಡುತ್ತ ಜ್ಞಾನವನ್ನು ಹೆಚ್ಚುಗಳಿಸಿಕೊಳ್ಳಿ ಎಂದರು.**

### ವೃತ್ತಿಯಲ್ಲಿ ಪ್ರಾಮಾಣಿಕತೆ, ಮಾನವೀಯತೆ ಇರಲಿ

**ಡಾ.ವಸೀನಾ ಬಾನು**

**ಕಾಲೇಜಿನ ಪ್ರಾಂಶುಪಾಲರಾದ ಡಾ.ವಸೀನಾ ಬಾನು.ಟಿ.ಎಸ್ ಮಾತನಾಡಿ, ನೀವು ಕಾಲೇಜಿಗೆ ಪ್ರವೇಶ ಪಡದಾಗ ನಿಮ್ಮ ಭವಿಷ್ಯದ ಬಗ್ಗೆ ನಿಮಗೆ ಚಿಂತೆ ಇತ್ತು. ಇಂದು ಕಾಲೇಜಿನ ವ್ಯಾಸಂಗ ಪೂರೈಸಿದ್ದೀರಿ, ನಿಮ್ಮಲ್ಲಿ ಭವಿಷ್ಯದ ಬಗ್ಗೆ ನಂಬಿಕೆಗಳಿಸಿಕೊಂಡಿದ್ದೀರಿ, ವಿಶ್ವವನ್ನು ಎದುರಿಸುವ ಸಾಮರ್ಥ್ಯ ಹೊಂದಿದ್ದೀರಿ. ವೃತ್ತಿಪರರಾಗುವ ಜವಾಬ್ದಾರಿಯುತರಾಗಿದ್ದೀರಿ ಎಂದರು. ಫಾರ್ಮಸಿ ಪದವಿದರರ ಬಗ್ಗೆ ಸಮಾಜದಲ್ಲಿ ವಿಶೇಷವಾಗಿ ರೋಗಿಗಳಲ್ಲಿ ನಂಬಿಕೆ ಮತ್ತು ವಿಶ್ವಾಸ ಇರುತ್ತದೆ. ಹೀಗಾಗಿ ನೀವು ಮತ್ತು ವೃತ್ತಿಯನ್ನು ಪ್ರಾಮಾಣಿಕವಾಗಿ ಮತ್ತು ಮಾನವೀಯತೆಯಿಂದ ನಡೆಸಿ ಎಂದರು.**

### ಫಾರ್ಮಸಿ ವೃತ್ತಿಪರರಿಗಿದೆ ವಿಫುಲ ಅವಕಾಶ – ಶಮೀರ್ ಪಾಷ

ಫಾರ್ಮಕಾಲಜಿ ವಿಭಾಗದ ಮುಖ್ಯಸ್ಥ ಶಮೀರ್ ಪಾಷ ಮಾತನಾಡಿ, ಫಾರ್ಮಸಿ ಪದವೀದರರಿಗೆ ವಿಶ್ವದಲ್ಲಿ ವಿಫುಲ ಅವಕಾಶಗಳಿವೆ ಎಂದರು. ಸದ್ಯ ವಿಶ್ವದಲ್ಲಿರುವ ಅವಕಾಶಗಳ ಬಗ್ಗೆ ಅವರು ಮಾಹಿತಿ ಕೊಟ್ಟರು. ಪದವಿ ಪೂರೈಸಿದ ವಿದ್ಯಾರ್ಥಿಗಳ ಪೈಕಿ ಕೆಲವರು ತಮ್ಮ ಅನಿಸಿಕೆಗಳು ಮತ್ತು ಅನುಭವಗಳನ್ನು ವ್ಯಕ್ತಪಡಿಸಿದರು. ಮಹಮದ್ ಸಮೀರ್ ಅನ್ಸಾರಿ ಸ್ವಾಗತಿಸಿದರು. ಬಿ.ಬಿ.ಹಾಜಿರ ಕಾರ್ಯಕ್ರಮ ನಿರೂಪಿಸಿದರು. ಮತ್ತೊಬ್ಬ ಹಳೆಯ ವಿದ್ಯಾರ್ಥಿ ಜೀಲಾನ್ ಪಾಷ ಮತ್ತು ಕಾಲೇಜು ಉಪನ್ಯಾಸಕರು ಉಪಸ್ಥಿತರಿದ್ದರು.

# ಅಕ್ರಮದಲ್ಲಿ ಯಶಸ್ವಿ ಸಂಘ

ಮೈಸೂರು: ನಗರದ ಬನ್ನೂರು ರಸ್ತೆ ದೇವೇಗೌಡ ವೃತ್ತದ ಬಳಿ ಇರುವ ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ. 25 ರಂದು ನಡೆಯಲಿದ್ದು, ಆಡಿಟ್ ವರದಿಗಳು ಪೂರ್ಣವಾಗದಿರುವುದು ಹಾಗೂ ಇನ್ನಿತರ ಕಾರಣಗಳಿಂದಾಗಿ ಅದು ನಿಯಮ ಬಾಹಿರವಾದುದಾಗಿದೆ ಎಂದು ಸದಸ್ಯರಲ್ಲೊಬ್ಬರಾದ ಬಸವರಾಜು ಆಲೂರು ಹಾಗೂ ಇನ್ನಿತರರು ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಿವೇಶನ ನೀಡಲು ಸಾಲುವಷ್ಟು ಜಮೀನು ಇಲ್ಲದಿದ್ದರೂ ಅಗತ್ಯಕ್ಕಿಂತಲೂ ಹೆಚ್ಚು ಮಂದಿಯನ್ನು ಸದಸ್ಯರನ್ನಾಗಿಸಿಕೊಳ್ಳಲಾಗಿದೆ. ಆರಂಭದಲ್ಲಿಯೇ ಹಣ ಕಟ್ಟಿದವರಿಗೆ ನಿವೇಶನ ನೀಡದೇ ಬೇಕು ಬೇಕಾದವರಿಗೆ ನೀಡಿ ಅಕ್ರಮ ಎಸಗಲಾಗಿದೆ. ಆಡಿಟ್ ವರದಿಗಳು ಸಮರ್ಪಕವಾಗಿಲ್ಲ. ಜೊತೆಗೆ ಸದಸ್ಯರಿಗೆ ಸೂಕ್ತ ಮಾಹಿತಿ ನೀಡದೇ ವಾರ್ಷಿಕ ಮಹಾಸಭೆ ಕರೆಯಲಾಗುತ್ತಿದೆ. ಹೀಗಾಗಿ ಇದು ಕಾನೂನು ಬಾಹಿರ. ಆದ್ದರಿಂದ ಸಹಕಾರ ಇಲಾಖೆ ಹಾಗೂ ಸಹಕಾರ ಸಚಿವರು ಇತ್ತ ಗಮನ ಹರಿಸಬೇಕೆಂದು ಕೋರಿದರು. ಇನ್ನಿತರ ಸದಸ್ಯರಾದ ಅರುಣ್, ಶಿವರಾಮೇಗೌಡ, ಎಂ.ಎಸ್. ಚಂದನ್, ಮಹೇಶ್ ಇದ್ದರು.





ರಾಮನಗರದ ಗೌಸಿಯಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ನಡೆದ ಆಂತರಿಕ ಗುಣಮಟ್ಟ ಭರವಸೆ ಕೋಶ ((ಐಕ್ಯುಎಸಿ) ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಜಿಐಇಟಿ ಅಧ್ಯಕ್ಷ ನವಾಜ್ ಎ.ಷರೀಫ್ ಅವರನ್ನು ಅಭಿನಂದಿಸಲಾಯಿತು. ಜಿಐಇಟಿ ಗೌರವ ಕಾರ್ಯದರ್ಶಿ ಹಾಗೂ ಅಲ್ ಅಮೀನ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಉಮರ್ ಇಸ್ಮಾಯಿಲ್ ಖಾನ್ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರು ಇದ್ದಾರೆ.

## ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿಕೆ

# ನಮ್ಮದು ಮುಸ್ಲಿಂ ವಿರೋಧಿ ಹೋರಟವಲ್ಲ

ಮೈಸೂರು: ಮಸೀದಿಯ ಎದುರು ಹೋದರೆ ಗ್ರಹಚಾರ ಬಿಡಿಸುತ್ತೇನೆಂದು ಹೇಳಿಕೆ ನೀಡಿದ ಪೊಲೀಸರ ವಿರುದ್ಧವೇ ನಮ್ಮ ಹೋರಾಟ ಹೊರತು ಮುಸ್ಲಿಂ ಸಮುದಾಯದ ವಿರುದ್ಧವಲ್ಲ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದ ಬಿಜೆಪಿ ಕಚೇರಿಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಾವು ಮುಸ್ಲಿಮ್ ಒಂದಲ್ಲ ಎಂದು ಹೇಳಿಲ್ಲ. ಆದರೆ, ಪೊಲೀಸ್ ಇನ್ಸ್ ಪೆಕ್ಟರ್ ಮಸೀದಿ ಮುಂದೆ ಹೋದರೆ ಗ್ರಹಚಾರ ಬಿಡಿಸುತ್ತೀನಿ ಎಂದು ಹೇಳಿದ್ದಾರೆ. ನಾವು ಯಾವುದೇ ಧರ್ಮ ಮತ್ತು ಯಾರಿಗೂ ತೊಂದರೆ ಕೊಡುತ್ತೇವೆ ಎಂದು ಹೇಳಿಲ್ಲ. ಇನ್ಸ್ ಪೆಕ್ಟರ್ ಹೇಳಿಕೆ ವಿಚಾರಕ್ಕೆ ನಾವು ಪ್ರತಿಭಟನೆ ನಡೆಸಿದ್ದೇವೆ ಹೊರತು ಯಾವುದೇ ಸಮುದಾಯದ ವಿಚಾರಕ್ಕೆ ಪ್ರತಿಭಟನೆ ಮಾಡಿಲ್ಲ ಎಂದು ಹೇಳಿದರು.

ಪ್ರತಿಷ್ಠಾಪನೆ ಮಾಡಿದ ಗಣಪತಿ ಆದರೆ ಚಪ್ಪಲಿ ಹಾಕಿಕೊಂಡು ಹಿಡಿದುಕೊಳ್ಳಬಾರದು.



ಪ್ರತಿಷ್ಠಾಪನೆ ಆಗದೇ ಇರುವ ಗಣಪತಿಯನ್ನು ಚಪ್ಪಲಿ ಹಾಕಿ ಹಿಡಿದುಕೊಂಡರೆ ಏನೂ ಸಮಸ್ಯೆಯಿಲ್ಲ. ನಾವು ಹಿಡಿದಿರುವ ಗಣಪತಿ ಪ್ರತಿಷ್ಠಾಪನೆ ಆಗಿರಲಿಲ್ಲ, ಪ್ರತಿಷ್ಠಾಪನೆ ಆಗಿದ್ದರೆ ಅದಕ್ಕೆ ಪೂಜೆ ಎಲ್ಲಾ ಮಾಡಬೇಕು. ಆದರೆ ಇದು ಪ್ರತಿಷ್ಠಾಪನೆ ಆಗಿರಲಿಲ್ಲ. ಹಾಗಾಗಿ ಅಲ್ಲಿನ ವಾತಾವರಣ ರಸ್ತೆ ನೋಡಿಕೊಂಡು ಚಪ್ಪಲಿ ಹಾಕಿಕೊಂಡಿದ್ದೆವು. ಈ ಸಂದರ್ಭದಲ್ಲಿ ಗಣಪತಿ ಕೈಯಲ್ಲಿ ಹಿಡಿದುಕೊಂಡರೆ ಏನೂ ಸಮಸ್ಯೆ ಇಲ್ಲ. ನಾನು ಇದೇ ಮೊದಲ ಬಾರಿಗೆ ಬಂದನಕ್ಕೆ ಒಳಗಾಗಿರಲಿಲ್ಲ. ಈ ಹಿಂದೆ ಮಡಿಕೇರಿಯಲ್ಲಿನ ಒಂದು ಘಟನೆ ಮತ್ತು ಮೈಸೂರು ಮುಡಾ ಹಗರಣದ ವಿಚಾರಕ್ಕೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾಗಿದ್ದೇನೆ. ಪೊಲೀಸರ ಬಂಧನಕ್ಕೆ ಒಳಗಾಗುವುದು ಸಂತೋಷ ಅಲ್ಲ, ಆದರೆ ಜನರಿಗಾಗಿ ನಾನು ಬಂಧನಕ್ಕೆ ಒಳಗಾಗುವುದರಲ್ಲಿ ಬೇಸರವಿಲ್ಲ ಎಂದು ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಾರ್ವಜನಿಕ ಜೀವನಕ್ಕೆ ಬಂದು 25 ವರ್ಷ ತುಂಬಿದ ಹಿನ್ನಲೆಯಲ್ಲಿ ಸೆ.17 ರಿಂದ ಅ.17 ರವರೆಗೆ ಒಂದು ತಿಂಗಳ ಕಾಲ ಮೈಸೂರಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ರಘು, ಮಾಜಿ ಮೇಯರ್ ಶಿವಕುಮಾರ್, ಸಂದೇಶ್ ಸ್ವಾಮಿ, ಬಿಜೆಪಿ ಮುಖಂಡರಾದ ಎಸ್. ಮಹದೇವಯ್ಯ, ಡಾ.ವಸಂತಕುಮಾರ್, ವಿನಯ್, ಸಂತೋಷ್, ವಿ.ಫಣೀಶ್, ಮಹೇಶ್ ರಾಜೇ ಅರಸ್, ರುದ್ರಮೂರ್ತಿಮ ಸೋಮಸುಂದರ್, ಪರೀಕ್ಷಿತ್ ರಾಜೇ ಅರಸ್, ವಿನಯ್ ರಾಮಚಂದ್ರು, ಸಂತೋಷಕುಮಾರ್, ಮಹದೇವಸ್ವಾಮಿ ಸೇರಿ ಹಲವರು ಉಪಸ್ಥಿತರಿದ್ದರು.

# ನಾಡಿನ ಎಲ್ಲಾ ಕ್ಷೇತ್ರದಲ್ಲೂ ಪ್ರಭಾವ ಬೀರಿದ ಕುವೆಂಪು



ಮೈಸೂರು: ವಿಶ್ವಕವಿ ಕುವೆಂಪು ಅವರು ನಮ್ಮ ನಾಡಿನ ಮತ್ತು ದೇಶದ ಐಕಾನ್ ಇದ್ದಂತೆ. ಕುವೆಂಪು ನಾಡಿನ ಎಲ್ಲಾ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದ್ದಾರೆ ಎಂದು ಲೇಖಕ ಅಗ್ರಹಾರ ಕೃಷ್ಣಮೂರ್ತಿ ಬಣ್ಣಿಸಿದರು.

ನಗರ ಮಾನಸ ಗಂಗೋತ್ರಿ ಆವರಣದಲ್ಲಿರುವ ಕನ್ನಡ ಕುವೆಂಪು ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಕಿರಂ ಪ್ರಕಾಶನದ ಸಹಯೋಗದೊಂದಿಗೆ ಬುಧವಾರ ನಡೆದ ಡಾ.ಕರೀಗೌಡ ಬೀಚನಹಳ್ಳಿ ಅವರ ವಿಶ್ವಕವಿ ಕುವೆಂಪು ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈಗಲೂ ಸಹ ನಾಡಿನ ಯಾವ ಮೂಲೆಯಲ್ಲೂ ಕಾರ್ಯಕ್ರಮ ನಡೆದರೆ ಅವರು ರಚಿಸಿರುವ ಗೀತೆಯ ಮೂಲಕವೇ ಪ್ರಾರಂಭವಾಗುತ್ತದೆ. ಕರ್ನಾಟಕದ ಯಾವ ಜಾಗಕ್ಕೆ ಹೋದರೂ ಸಹ ಅಲ್ಲಿನ ಸಾರ್ವಜನಿಕ ಸ್ಥಳಗಳನ್ನು ನೋಡಿದರೆ ಅಲ್ಲಿ ಕುವೆಂಪು ಅವರ ಭಾವಚಿತ್ರಗಳು ಬೇರೆ ಬೇರೆ ಕಾರಣಕ್ಕೆ ಇರುತ್ತದೆ. ಅದು ಅನೇಕರಿಗೆ ಅವರು ಯಾರು ಅಂತ ತಿಳಿಯದ್ದಿರೂ ಸಹ ಅವರ ಮಾತುಗಳು, ವಿಚಾರಗಳು, ಸಾಹಿತ್ಯಗಳು ನಾಡಿನ ಜನರಲ್ಲಿ ಜಿನುಗುತ್ತಿರುತ್ತದೆ ಎಂದರು.

ನ್ಯಾಯಾಧೀಶರಾಗಿದ್ದ ಎ.ಜೆ. ಸದಾಶಿವ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಕಾಲದಲ್ಲಿ ಕುವೆಂಪು ಅವರು ಕುಲಪತಿಗಳಾಗಿದ್ದರು. ಆ ಸಂದರ್ಭದಲ್ಲಿ ಕುವೆಂಪು ಅವರ ವಿರುದ್ಧ ಯಾವುದೋ ಕಾರಣಕ್ಕೆ ವಿದ್ಯಾರ್ಥಿಗಳು, ನೌಕರರು ಮುಷ್ಕರ ಮಾಡುತ್ತಿದ್ದರು. ಕಿಕ್ಕಿರುದು ಘೋಷಣೆಗಳನ್ನು ಕೂಗುತ್ತಿದ್ದ ಪ್ರತಿಭಟನಾ ಕಾರರು ಕುವೆಂಪು ಅವರು ಕಾರಿನಿಂದ ಬಂದು ಇಳಿದ ತಕ್ಷಣ ಮುಷ್ಕರನಿರತರು ತಮ್ಮ ಘೋಷಣೆಗಳನ್ನು ನಿಲ್ಲಿಸಿ ಇಬ್ಭಾಗವಾಗಿ ಕುವೆಂಪು ಅವರನ್ನು ಹೋಗಲು ಬಿಟ್ಟರು. ಈ ಘಟನೆಯನ್ನು ಕಣ್ಣಾರೆ ಕಂಡಂತಹ ಎ.ಜೆ ಸದಾಶಿವಪ್ಪ ಅವರು ಕುವೆಂಪು ಅವರನ್ನು ಬೈಬಲ್‌ನಲ್ಲಿ ಬರುವ ಮೋಸೆಸ್ ಅವರಿಗೆ ಹೋಲಿಸಿದ್ದಾರೆ ಎಂದು ತಿಳಿಸಿದರು.

ಕುವೆಂಪು ಅವರು ಬರೆಯದಿರುವ ಪ್ರಕಾರವೇ ಇಲ್ಲ. ನಾವೆಲ್ಲರೂ ಅವರ ಸಾಹಿತ್ಯವನ್ನು ಓದಬಹುದು. ನಾವು ಅವರ ಜತೆ ಕನೆಕ್ಟ್ ಆಗಲು ಯೋಗ್ಯತೆ ಇಲ್ಲದಿದ್ದರೂ ಸಹ ಅವರ ವಿಚಾರಧಾರೆಗಳಿಗೆ, ಸಾಹಿತ್ಯಕ್ಕೆ ಮತ್ತು ಅವರು ಹೇಳಿದಂತಹ ವಿಚಾರಗಳಿಗೆ ಕನೆಕ್ಟ್ ಆಗಬೇಕು. ಕುವೆಂಪು ಅವರು ಹೇಳಿದ ಮಂತ್ರಮಾಂಗಲ್ಯದಿಂದ ಸಾವಿರಾರು ಮದುವೆಗಳಾಗಿದೆ ಎಂದರು. ಕುವೆಂಪು, ಗಾಂsಸೇರಿದಂತೆ ದೊಡ್ಡ ದೊಡ್ಡ ವ್ಯಕ್ತಿಗಳನ್ನು ಆರಾsಸುವ, ಪೂಜಿಸುವ ಬದಲು ನಮ್ಮನ್ನು ನಾವು ಎಷ್ಟರ ಮಟ್ಟಿಗೆ ಅವರ ಜತೆ ಕನೆಕ್ಟ್ ಮಾಡಿಕೊಳ್ಳಲು ಸಾಧ್ಯ ಎನ್ನುವುದರ ಮೂಲಕ ನಾವು ನಿಜವಾಗಿಯೂ ಅವರಿಗೆ, ಅವರ ವ್ಯಕ್ತಿತ್ವಕ್ಕೆ, ಸಾಹಿತ್ಯಕ್ಕೆ ಬೆಲೆಯನ್ನು ಕೊಡುವಂತಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಜೆ.ಶಶಿಧರ ಪ್ರಸಾದ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ.ಎಂ.ನಂಜಯ್ಯ ಹೊಂಗನೂರು, ಡಾ. ಕರೀಗೌಡ ಬೀಚನಹಳ್ಳಿ ಹಾಜರಿದ್ದರು.

# ಕಲಾಪ ಬಹಿಷ್ಕರಿಸಿ ಪ್ರತಿಭಟನೆ



ಗುಂಡ್ಲುಪೇಟೆ: ವಕೀಲ ರವಿ ಅವರ ಮೇಲೆ ರೌಡಿ ಶೀಟರ್ ಎನ್ನಲಾದ ವ್ಯಕ್ತಿಯೊಬ್ಬರು ಲಾಂಗು ಮಚ್ಚಿನಿಂದ ಹಲ್ಲೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಕೊಲೆಯತ್ನದ ಕಲಂ ದಾಖಲಿಸಿಲ್ಲ ಎಂದು ಆರೋಪಿಸಿ, ವಕೀಲರ ಸಂಘದ ಸದಸ್ಯರು ಬುಧವಾರ ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಸೆ.9ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಆರೋಪಿಯನ್ನು ಕೂಡಲೇ ಬಂಧಿಸಿ, ಆತನ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಬೇಕು. ಅಲ್ಲದೆ, ಆರೋಪಿಯನ್ನು ಗಡಿಪಾರು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ತಾಲೂಕಿನಲ್ಲಿ ರೌಡಿ ಶೀಟರ್‌ಗಳ ಅಟ್ಟಹಾಸ ಹೆಚ್ಚಾಗುತ್ತಿದ್ದರೂ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ವಕೀಲರು ಆರೋಪಿಸಿದರು. ವಕೀಲರ ಮೇಲೆಯೇ ಹಲ್ಲೆಗೆ ಯತ್ನಿಸಿರುವುದು ಗಂಭೀರ ವಿಚಾರವಾಗಿದ್ದು, ಪ್ರಕರಣದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಆರೋಪಿಯ ವಿರುದ್ಧ ಸೂಕ್ತ ಕಲಂಗಳನ್ನು ದಾಖಲಿಸಿ ತಕ್ಷಣ ಬಂಧಿಸಬೇಕು ಹಾಗೂ ಸಾರ್ವ ಜನಿಕರು ಮತ್ತು ವಕೀಲರಿಗೆ ಸೂಕ್ತ ಭದ್ರತೆ ಒದಗಿಸ ಬೇಕು ಎಂದು ವಕೀಲರ ಸಂಘ ಒತ್ತಾಯಿಸಿತು. ಪ್ರತಿಭಟನೆಯ ಹಿನ್ನೆಲೆಯಲ್ಲಿ ವಕೀಲರು ನ್ಯಾಯಾಲಯದ ಕಲಾಪದಿಂದ ದೂರ ಉಳಿದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.



## ಕೃಷ್ಣ ವಂದನ

**ಸ್ನೇಹಾ ಆನಂದ್**



### ಹೇ ಕೃಷ್ಣಾ !

**ನಡೆದು ಬಾರಯ್ಯ**
**ಹರಿ,ಸಿರಿದೇವಿಯೊಡಗೂಡಿ!**
**ಕಡಲ ಶಯನನೇ ಕರೆಯುವೆ ಕರುಣದಿ,**
**ಸ್ಮರಣೆಯ ಮಾಡುವೆ ತ್ವರಿತದಿಂದಲಿ ಬಾರೋ,**
**ಕರುವಿನ ಮೊರೆ ಕೇಳಿ ದೇವಕಿ ತನಯ!**

**ಸುದಾಮ ಸಖನೆಂದು,ಬಿರುದು ನಿಂದಾದರೆ,**
**ಮನಸಿನ ಮೊರೆ ಕೇಳಿ, ಮುದದಿಂದಲಿ ಬಂದು**
**ಬಡವರ ಮನೆಯನು ಸಿರಿತನದಲಿ ತೋರೋ,**
**ಸಿರಿ ಅರಸನೆಂಬೊ ಉರಗಾದ್ರಿವಾಸ!**

**ಕರಿರಾಜ ಕರೆದರೆ ತ್ವರಿತದಿಂದಲಿ ಪೋದೆ**
**ಭಕ್ತ ವತ್ಸಲನೆಂಬೋ ಹೆಸರು ಬೇಕೆಂದರೆ**
**ಭರದಿಂದಲಿ ಬಾರೋ ಭಕುತರ ಮನೆಗೀಗ**
**ವೈಕುಂಠವಾಸನೇ, ಗರಡ ಗಮನೆಂಬೋ**
**ಹೇಮಗಿರೀಶನೆ!**

# ಸಾಗುವಳಿ ಪತ್ರ, ಎನ್‌ಒಸಿಗೆ ಆಗ್ರಹಿಸಿ ರೈತರ ಪ್ರತಿಭಟನೆ



ಗುಂಡ್ಲುಪೇಟೆ, :- ಹಲವು ವರ್ಷಗಳಿಂದ ಉಳುಮೆ ಮಾಡಿಕೊಂಡು ಬರುತ್ತಿರುವ ರೈತರಿಗೆ ಸಾಗುವಳಿ ಪತ್ರ ವಿತರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು.

ತಾಲೂಕಿನ ಬಂಡೀಪುರದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಮುಂಭಾಗ ಜಮಾವಣೆಗೊಂಡ ರೈತರು ಸರ್ಕಾರ ಹಾಗೂ ಅರಣ್ಯ ಇಲಾಖೆ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, ಸುಮಾರು 60?70 ವರ್ಷಗಳಿಂದ ಕೃಷಿ ಮಾಡಿಕೊಂಡು ಬರುತ್ತಿರುವ ರೈತರಿಗೆ ಸಾಗುವಳಿ ನೀಡಲು ಅರಣ್ಯ ಇಲಾಖೆಯಿಂದ ಎನ್‌ಒಸಿ ನೀಡಬೇಕು. ಈಗಾಗಲೇ ಸರ್ಕಾರದಿಂದ ಸಾಗುವಳಿ ಮಂಜೂರು ಮಾಡಿರುವ ರೈತರಿಗೆ ಹಕ್ಕುಪತ್ರ ಹಾಗೂ ಪಹಣಿ ವಿತರಿಸಬೇಕು. ಹದ್ದುಬಸ್ತು ದುರಸ್ತಿ ಕಾರ್ಯವನ್ನು 1ರಿಂದ 5ರವರೆಗೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

1990?91 ಹಾಗೂ 2018ರಿಂದ 2023ರವರೆಗೆ ಸಾಗುವಳಿಗಾಗಿ ಅರ್ಜಿ ಸಲ್ಲಿಸಿರುವ ರೈತರ ಅಗತ್ಯ ದಾಖಲೆಗಳನ್ನು ತಾಲೂಕು ಕಚೇರಿಯಿಂದ ಅರಣ್ಯ ಇಲಾಖೆಗೆ ಕಳುಹಿಸಲಾಗಿದೆ. ಆದರೆ ಅರಣ್ಯ ಇಲಾಖೆಯಿಂದ ತೊಂದರೆಯಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಹಾಗಾದರೆ ಈ ವಿಚಾರದಲ್ಲಿ ಯಾರು ಸತ್ಯ ಹೇಳುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ರೈತ ಸಂಘದ ತಾಲೂಕು ಅಧ್ಯಕ್ಷ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮಹದೇವ ಪ್ರಸಾದ್, ಯುವ ಘಟಕದ ಅಧ್ಯಕ್ಷ ಪ್ರವೀಣ್, ಕಾರ್ಯದರ್ಶಿ ರಘು, ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಕಾರ್ಯದರ್ಶಿ ಚಿಕ್ಕಸಿದ್ದಮ್ಮ, ಶಿವಕುಮಾರ್ ಪಿ.ಕೆ., ರಾಜಶೇಖರ್, ಸುಬಾಷ್, ಚಂದ್ರು, ಬಸವಣ್ಣ, ಸಿದ್ಧಶೆಟ್ಟಿ, ಸುರೇಶ, ಕೃಷ್ಣ, ರೇವಣ್ಣ ಸೇರಿದಂತೆ ಇತರರು ಭಾಗವಹಿಸಿದ್ದರು.

# ನಿಗದಿತ ಸಮಯಕ್ಕೆ ವೇತನ ನೀಡಿ

## ಜಿ.ಪಂ. ಸಿಇಒ ಮೋನಾ ರೋತ್ ಸೂಚನೆ | ವಿಬಿ ಜಿ ರಾಮ್ ಜೀ ಯೋಜನೆ




ಚಾಮರಾಜನಗರ: 'ವಿಬಿ ಜಿ ರಾಮ್ ಜೀ' ಯೋಜನೆಯು ಗ್ರಾಮೀಣ ಉದ್ಯೋಗ ವ್ಯವಸ್ಥೆಯನ್ನು ತಳಮಟ್ಟದಿಂದ ಬಲಪಡಿಸುವ ಗುರಿ ಹೊಂದಿದೆ. ಇದು ರೈತರು ಹಾಗೂ ಕಾರ್ಮಿಕರ ಘನತೆಗೆ, ಪಾರದರ್ಶಕತೆಗೆ ಹಾಗೂ ನಿಜವಾದ ಗ್ರಾಮೀಣ ಸಬಲೀಕರಣಕ್ಕೆ ಒತ್ತು ನೀಡುತ್ತಿರುವುದರಿಂದ, ಕೂಲಿ ಕೆಲಸ ಮಾಡಿದ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಕೂಲಿ ವೇತನ ಪಾವತಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯಳಂದೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಕೊಳ್ಳೇಗಾಲ ಮತ್ತು ಯಳಂದೂರು ಕಾರ್ಯನಿರ್ವಾಹಕ ಅಧಿಕಾರಿಗಳಾದ ಕುಮಾರ್, ವೇಣು, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸುದನ್ವ ನಾಗ್, ಸಹಾಯಕ ನಿರ್ದೇಶಕರು (ಗ್ರಾ.ಉ), ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿಬಿ ಜಿ ರಾಮ್ ಜೀ ಯೋಜನೆಯ ಸಿಬ್ಬಂದಿಗಳು, ಎನ್‌ಆರ್‌ಎಲ್ ಮತ್ತು ವಸತಿ ಯೋಜನೆಯ ಸಿಬ್ಬಂದಿಗಳು ಹಾಜರಿದ್ದರು.

### ಕುಡಿಯುವ ನೀರು, ವಸತಿ ಯೋಜನೆ, ಸ್ವಚ್ಛತಾ ಆಂದೋಲನ

**ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಹಾಗೂ ಜಲ್ ಜೀವನ್ ಮಿಷನ್ ಯೋಜನೆಯನ್ನು ಎಲ್ಲಾ ಗ್ರಾಮಗಳಲ್ಲಿ ಅನುಷ್ಠಾನ ಗೊಳಿಸುವಂತೆ ಅವರು ತಿಳಿಸಿದರು. ಜೊತೆಗೆ, ವಸತಿ ಯೋಜನೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಿ ಪ್ರಗತಿ ಸಾಧಿಸುವಂತೆ ಹೇಳಿದರು. ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2ರವರೆಗೆ ನಡೆಯಲಿರುವ 'ಸ್ವಚ್ಛತಾ ಹೀ ಸೇವಾ' ಆಂದೋಲನದ ಅಂಗವಾಗಿ ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳು ಮತ್ತು ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡುವ ಜೊತೆಗೆ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.**

### ಮಾನವ ದಿನಗಳ ಸೃಷ್ಟಿ ಹಾಗೂ ಕನಿಷ್ಠ 60 ಜನರಿಗೆ ಉದ್ಯೋಗ

**ಯಳಂದೂರು ಮತ್ತು ಕೊಳ್ಳೇಗಾಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳ ಕಾರ್ಯವನ್ನು ಜಂಟಿಯಾಗಿ ಪ್ರಗತಿ ಪರಿಶೀಲಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪ್ರಸ್ತುತ ಜನರಿಗೆ ಕೂಲಿ ಅವಶ್ಯಕವಾಗಿದ್ದು, ಆದ್ಯತೆಯ ಮೇರೆಗೆ ಉದ್ಯೋಗ ನೀಡಬೇಕು ಎಂದರು. ಮಾನವ ದಿನಗಳು ಶೂನ್ಯವಾಗದಂತೆ ನೋಡಿಕೊಳ್ಳಬೇಕು ಮತ್ತು ಪ್ರತಿ ಗ್ರಾಮ ಪಂಚಾಯಿತಿಯಲ್ಲಿಯೂ ಕನಿಷ್ಠ 60 ಜನರು ಕೆಲಸ ಮಾಡುವಂತೆ ಎಚ್ಚರ ವಹಿಸುವಂತೆ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.**

# ವಿದ್ಯುತ್ ಪೂರೈಕೆ ಸಮರ್ಪಕ ನಿರ್ವಹಣೆಗೆ ನಿಗಾವಹಿಸಿ

## ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಎಂ.ಎಸ್.ಅರ್ಚನಾ ಸೂಚನೆ



**ಚಾಮರಾಜನಗರ.** ಗ್ರಾಹಕರಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಕಟ್ಟುನಿಟ್ಟಿನ ನಿಗಾವಹಿಸಿ, ಲಭ್ಯವಿರುವ ವಿದ್ಯುತ್ ಅನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಗ್ರಾಹಕರು ಹಾಗೂ ರೈತರಿಗೆ ಸಾಧ್ಯವಾದಷ್ಟು ಅಡಚಣೆ ರಹಿತ ವಿದ್ಯುತ್ ಪೂರೈಕೆ ಮಾಡುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕರಾದ ಎಂ.ಎಸ್. ಅರ್ಚನಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೊಳ್ಳೇಗಾಲ ಉಪ ವಿಭಾಗಕ್ಕೆ ಭೇಟಿ ನೀಡಿದ ಅವರು ಕೊಳ್ಳೇಗಾಲ, ಹನೂರು ಹಾಗೂ ಯಳಂದೂರು ತಾಲೂಕುಗಳು ಒಳಪಡುವ ಕೊಳ್ಳೇಗಾಲ ಉಪ ವಿಭಾಗದ ವಿದ್ಯುತ್ ಪೂರೈಕೆ ಪರಿಸ್ಥಿತಿ ಹಾಗೂ ನಿರ್ವಹಣೆ, ಐಪಿ ಫೀಡರ್‌ಗಳಿಗೆ ವಿದ್ಯುತ್ ಪೂರೈಕೆ ಮತ್ತು ಗೃಹಜ್ಯೋತಿ ಯೋಜನೆ ಫಲಾನುಭವಿಗಳ ಮಾಹಿತಿ ಸಂಗ್ರಹಣೆ ಕುರಿತ ಪ್ರಗತಿ ಪರಿಶೀಲನೆ ನಡೆಸಿ, ಮಾಹಿತಿಗಳನ್ನು ಪಡೆದರು. ರಾಜ್ಯದಲ್ಲಿ ವಿದ್ಯುತ್ ಲಭ್ಯತೆ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆ ಯಲ್ಲಿ, ಪ್ರಸ್ತುತ ಎದುರಾಗಿರುವ ವಿದ್ಯುತ್ ಲಭ್ಯತೆಯ ಕೊರತೆಯ ನಡುವೆಯೂ ಗ್ರಾಹಕರಿಗೆ ನೀಡುವ ವಿದ್ಯುತ್ ಸೇವೆಯಲ್ಲಿ ಹೆಚ್ಚಿನ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಅಲ್ಲದೇ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಅಥವಾ ತಾಂತ್ರಿಕ ಸಮಸ್ಯೆಗಳು ಎದುರಾದಲ್ಲಿ ಅವುಗಳನ್ನು ತ್ವರಿತವಾಗಿ ಗುರುತಿಸಿ ಪರಿಹರಿಸಬೇಕು. ರೈತರ ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ವಿದ್ಯುತ್ ಪೂರೈಕೆ ಹಾಗೂ ಗ್ರಾಮೀಣ ಪ್ರದೇಶಗಳ ವಿದ್ಯುತ್ ವ್ಯವಸ್ಥೆಯ ಮೇಲೂ ನಿರಂತರ ನಿಗಾವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಸೂಚಿಸಿದರು.

ಪ್ರಸ್ತುತ ವಿದ್ಯುತ್ ಪೂರೈಕೆ ನಿರ್ವಹಣೆಯಲ್ಲಿ ಎದುರಾಗಿರುವ ಸವಾಲುಗಳನ್ನು ಸ್ಥಳೀಯ ಮಟ್ಟದಲ್ಲಿಯೇ ಸಮರ್ಥವಾಗಿ ನಿಭಾಯಿಸಬೇಕು. ಗ್ರಾಹಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವುದರ ಜೊತೆಗೆ ವಿದ್ಯುತ್ ಪೂರೈಕೆಯ ಗುಣಮಟ್ಟದ ಬಗ್ಗೆ ನಿರಂತರ ಪರಿಶೀಲನೆ ನಡೆಸುವಂತೆ ತಿಳಿಸಿದರು.

ಕೊಳ್ಳೇಗಾಲ ಉಪ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ತಬ್ಸುಮ್ ಸೇರಿದಂತೆ ಸೆಸ್ಕ್‌ನ ವಿವಿಧ ಅಧಿಕಾರಿಗಳು ಹಾಗೂ ರೈತ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ನೂತನ ದೇವಾಲಯ ಲೋಕಾರ್ಪಣೆ



ಸರಗೂರು: ಸಮೀಪದ ಆಗತ್ತೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಸಾತಗಳ್ಳಿ ಅಮ್ಮನವರ ದೇವಾಲಯವನ್ನು, ಕಿತ್ತೂರಿನ ರವಿರಾಮೇಶ್ವರ ದೇವಾಲಯದ ಅರ್ಚಕರಾದ ಬಾಸ್ಕರ್ ಅವರ ಮಾರ್ಗದರ್ಶನದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿವೃತ್ತ ಅಧಿಕಾರಿ ಎ.ಸಿ.ನಾರಾಯಣ್, ಪತ್ನಿ ಯಶೋಧ ಅವರು ಹೋಮ, ಹವನ ಸೇರಿದಂತೆ ಪೂಜಾಧಿಗಳನ್ನು ನೆರವೇರಿಸಿ ಲೋಕಾರ್ಪಣೆಗೊಳಿಸಿದರು.

ದೇವರ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಅಲಂಕಾರಗೊಳಿಸಿದ್ದು, ಬೆಳಗ್ಗೆಯಿಂದಲೇ ಪೂಜಾ ಕೈಕಂಕರ್ಯಗಳು ನೆರವೇರಿದ್ದವು. ಭಕ್ತಾಧಿಗಳಿಗೆ ಪ್ರಸಾದ ವಿನಿಯೋಗ ನಡೆಯಿತು. ಹಿರಿಯರ ಜ್ಞಾಪಕಾರ್ಥವಾಗಿ ಎಸಿ.ನಾರಾಯಣ್ ಕುಟುಂಬಸ್ಥರು ಹಾಗೂ ಚಲುವನಾರಾಯಣಸ್ವಾಮಿ ಕುಲದವರ ಸಹಕಾರ್‌ಇಂದ ದೇವಾಲಯ ನಿರ್ಮಿಸಿದ್ದರು. ಮೈಸೂರಿನ ವಕೀಲ ಲೋಕೇಶ್, ಶ್ರೀದೇವಿ, ವೈದ್ಯಾಧಿಕಾರಿ ರವಿಚೇತನ್ ಕುಮಾರ್, ನಾಗೇಂದ್ರ, ಚಲುವರಾಜು, ಹರ್ಷಿತಾ, ಡಿ.ರೇವಣ್ಣ, ನಾಗಮಣಿ, ಗುಂಡಮ್ಮ ಸೇರಿದಂತೆ ಗ್ರಾಮಸ್ಥರು ಅನೇಕರಿದ್ದರು.

# ಹುಲಿದಾಳಿಯಿಂದ ಮೃತಪಟ್ಟ ರೈತನ ನಿವಾಸಕ್ಕೆ ಎಂಎಲ್ಸಿ ತಿಮ್ಮಯ್ಯ ಭೇಟಿ



ಚಾಮರಾಜನಗರ: ಹುಲಿದಾಳಿಯಿಂದ ಮೃತಪಟ್ಟ ರೈತ ತಾಲೂಕಿನ ಬಡಗಲಪುರದ ಬಸವಣ್ಣ ನಿವಾಸಕ್ಕೆ ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ ಭೇಟಿ ನೀಡಿ ಮೃತ ಕುಟುಂಬದವರಿಗೆ ಸಾಂತ್ವನ ಹೇಳಿ ಧನಸಹಾಯ ಮಾಡಿದರು.

ನಂತರ ಮಾತನಾಡಿ, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ದಲಿತ ಸಮುದಾಯದ ರೈತ ಬಸವಣ್ಣ ಅವರ ಮೇಲೆ ಹುಲಿ ದಾಳಿ ನಡೆಸಿ ತಿಂದು ಹಾಕಿರುವುದು ಒಂದು ದುರಂತವೇ ಸರಿ. ಜಿಲ್ಲಾ ಉಸ್ತುವಾರಿ ಸಚಿವರು, ಸಮಾಜ ಕಲ್ಯಾಣ ಸಚಿವರೊಡನೆ ಮಾತನಾಡಿ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಕೊಡಿಸಿಕೊಡುವುದಾಗಿ ತಿಳಿಸಿದರು. ಹುಲಿದಾಳಿಯಿಂದ ಗ್ರಾಮಸ್ಥರು ಆತಂಕದಲ್ಲಿದ್ದು, ಗ್ರಾಮಸ್ಥರು ತಮ್ಮ ಜಮೀನುಗಳಲ್ಲಿ ಕೃಷಿ ಚಟುವಟಿಕೆ ಮಾಡುವುದು ಕಷ್ಟ ವಾಗಿದೆ. ಅರಣ್ಯ ಅಧಿಕಾರಿಗಳು ಹುಲಿ ಸೆರೆಹಿಡಿಯಬೇಕು. ಇಂತಹ ಘಟನೆ .ಮರುಕಲಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ, ಹರವೆ ನಾಗೇಶ್, ಪ್ರಕಾಶ್ ಇತರರು ಹಾಜರಿದ್ದರು.

## ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ

# ಗದ್ದುಗೆ ಉದ್ಘಾಟನೆ ಹಾಗೂ ಕಳಸಾರೋಹಣ ಸಮಾರಂಭ



ಗುಂಡ್ಲುಪೇಟೆ:- ತಾಲ್ಲೂಕಿನ ಹೊರಯಾಲ ಗ್ರಾಮದಲ್ಲಿ ಶ್ರೀ ಭಿಕ್ಷದ ಸಿದ್ದರಾಮ ದೇವರ ಪ್ರಥಮ ವರ್ಷದ ಪುಣ್ಯಾರಾಧನೆ ಅಂಗವಾಗಿ ನೂತನವಾಗಿ ನಿರ್ಮಿಸಿರುವ ಗದ್ದುಗೆ ಉದ್ಘಾಟನೆ ಹಾಗೂ ಕಳಸಾರೋಹಣ ಸಮಾರಂಭ ಭಕ್ತಿಭಾವದಿಂದ ನೆರವೇರಿಸಲಾಯಿತು.

ದೇವನೂರು ಮಠದ ಮಹಾಂತಸ್ವಾಮಿಗಳ ದಿವ್ಯಪಾದಪೂಜೆ, ಪುಷ್ಪಾಂದೋಳಿಕ ಮಹೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಜರುಗಿದವು. ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮನುಷ್ಯನ ಬದುಕಿನಲ್ಲಿ ಜೀವವೇ ಭಗವಂತನ ಸ್ವರೂಪ. ಜೀವ ಇಲ್ಲದಿದ್ದರೆ ಮನುಷ್ಯ ಶವವಾಗುತ್ತಾನೆ. ಪ್ರಕೃತಿಗೆ ಇರುವ ಶಕ್ತಿ ಯಾರಿಗೂ ಇಲ್ಲ. ಭಗವಂತನ ಕೃಪೆಯಿಂದಲೇ ಎಲ್ಲವೂ ಸಾಧ್ಯ ಎಂದರು. ಮಗುವಿನ ಹುಟ್ಟಿನಿಂದ ಸಾಯುವವರೆಗೆ ಆಧ್ಯಾತ್ಮಿಕ ಸಂಸ್ಕಾರ ಹಾಗೂ ಮೋಕ್ಷ ಪ್ರಾಪ್ತಿಯ ಆಶಯವನ್ನು ನಮ್ಮ ಪರಂಪರೆ ಹೊಂದಿದೆ.

ಅಭಿಮನ್ಯುವಿನ ಚಕ್ರವ್ಯೂಹದ ಪ್ರಸಂಗವನ್ನು ಉದಾಹರಿಸಿದ ಶ್ರೀಗಳು, ತಿಳುವಳಿಕೆಯನ್ನು ಸಂಪೂರ್ಣವಾಗಿ ಪಡೆದುಕೊಳ್ಳುವ ಮಹತ್ವವನ್ನು ವಿವರಿಸಿದರು. ಎಲ್ಲವನ್ನೂ ತೊರೆದು ಸರಳ ಜೀವನ ನಡೆಸಿದವರು. ಅವರ ಬದುಕಿನ ಆದರ್ಶಗಳನ್ನು ಸ್ಮರಿಸಿಕೊಂಡು ಸಹೋದರರು ಹಾಗೂ ಗ್ರಾಮಸ್ಥರು ಸಹಕಾರದಿಂದ ಗದ್ದುಗೆ ನಿರ್ಮಿಸಿರುವುದು ಶ್ಲಾಘನೀಯ ಎಂದರು.

ಸೋಮಹಳ್ಳಿ ಮಠದ ಸಿದ್ದಮಲ್ಲಸ್ವಾಮಿಗಳು ಮಾತನಾಡಿ, ಸಿದ್ದರಾಮ ದೇವರು ಭಿಕ್ಷದ ಗುರುಗಳಾಗಿದ್ದು, ಔಪಚಾರಿಕ ಶಿಕ್ಷಣ ಕಡಿಮೆ ಇದ್ದರೂ ಸಾಮಾಜಿಕ ಕಾಳಜಿಯೊಂದಿಗೆ ಬದುಕಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದರು.

ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ಸಿದ್ದರಾಮ ದೇವರು ಎಲ್ಲರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದರು. ಯಾವುದೇ ಆಸೆ-ಆಕಾಂಕ್ಷೆಗಳಿಗೆ ಒಳಗಾಗದೆ ಬದುಕಿದ ಅವರ ಆದರ್ಶಗಳನ್ನು ಗ್ರಾಮಸ್ಥರು ಸ್ಮರಿಸಿಕೊಂಡು ಗದ್ದುಗೆ ನಿರ್ಮಿಸಿ ಕಾರ್ಯಕ್ರಮ ಆಯೋಜಿಸಿರುವುದು ಅವರ ಮೇಲಿನ ಭಕ್ತಿ ಹಾಗೂ ಪ್ರೀತಿಯನ್ನು ತೋರಿಸುತ್ತದೆ ಎಂದರು.

ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿ, ಸಿದ್ದರಾಮ ದೇವರು ಭಿಕ್ಷದ ಮಠದ ಪರಂಪರೆಯಲ್ಲಿ ಸಾಗಿದವರು. ದೇವನೂರು ಮಠದ ಭಿಕ್ಷದ ಗುರುಗಳಾಗಿ ಕಪ್ಪುಬಟ್ಟೆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದರು. ಗುರುಮಲ್ಲೇಶ್ವರರು ದೇವನೂರು ಮಠದಲ್ಲಿ ಹಚ್ಚಿದ ಆಧ್ಯಾತ್ಮಿಕ ಜ್ಯೋತಿ ಇಂದಿಗೂ ಮುಂದುವರಿದಿದೆ. ಸಿದ್ದರಾಮ ದೇವರು ಸ್ವಾರ್ಥ, ಆಸೆ-ಆಕಾಂಕ್ಷೆಗಳಿಂದ ದೂರವಾಗಿ ಬದುಕಿದವರು ಎಂದರು. ಕಾರ್ಯಕ್ರಮದಲ್ಲಿ ದೇವನೂರು ಮಠದ ಮಹಾಂತಸ್ವಾಮಿಗಳು, ಸೋಮಹಳ್ಳಿ ಮಠದ ಸಿದ್ದಮಲ್ಲಸ್ವಾಮಿಗಳು, ಮಾದಾಪಟ್ಟಣ ಮಠದ ತೊಂಟದಾರ್ಯಸ್ವಾಮಿಗಳು, ಕುದೇರು ಮಠದ ಇಮ್ಮಡಿ ಗುರುಲಿಂಗಸ್ವಾಮಿಗಳು, ದೇವನೂರು ಮಠದ ಪ್ರಸಾದಸ್ವಾಮಿಗಳು, ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಬೋಗಯ್ಯನಹುಂಡಿ ಮಠದ ನಂಜುಂಡಸ್ವಾಮಿಗಳು ಸೇರಿದಂತೆ ಭಕ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಅವ್ವೇರಹಳ್ಳಿಯ ಅಕ್ಷತಾಗೆ ಡಾಕ್ಟರೇಟ್ ಪದವಿ ಪುರಸ್ಕಾರ



ರಾಮನಗರ: ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿ ಗ್ರಾಮದ ನಿವಾಸಿ ಅಕ್ಷತಾ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿದೆ. ಇವರು ಸ್ವಾತಂತ್ರ್ಯೋತ್ತರ ಮಹಿಳಾ ಕಾವ್ಯದಲ್ಲಿ ಸ್ತ್ರೀ ವಿಮೋಚನೆ ಮತ್ತು ಸ್ತ್ರೀ ಅಸ್ಮಿತೆ ಪ್ರಾತಿನಿಧಿಕ ಕವನ ಸಂಕಲನಗಳ ಅಧ್ಯಯನ ಎನ್ನುವ ವಿಷಯವನ್ನು ಕುರಿತು ಡಾ. ನಟರಾಜ್ ಹುಳಿಯಾರ್ ಅವರ ಮಾರ್ಗದರ್ಶನದಲ್ಲಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಂಶೋಧನೆ ನಡೆಸಿ ಮಹಾಪ್ರಬಂಧ ಮಂಡಿಸಿರುತ್ತಾರೆ. ಅಕ್ಷತಾ ಅವರು ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿ ಗ್ರಾಮದ ನಿವಾಸಿಗಳಾದ ಮೋಹನ್ ಮತ್ತು ಪುಟ್ಟಮ್ಮ ಅವರ ಪುತ್ರಿ. ಪ್ರಸ್ತುತ ಇವರು ಬೆಂಗಳೂರಿನ ಸಪ್ತಗಿರಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿ ಉದ್ಯೋಗದಲ್ಲಿದ್ದಾರೆ.

# ಪ್ರಯಾಣಿಕರ ದಟ್ಟಣೆ, ಅವಶ್ಯಕತೆಗೆ ತಕ್ಕಂತೆ ಬಸ್ ಸೌಲಭ್ಯ ಕಲ್ಪಿಸಿ: ಕೆ.ರಾಜು

## ಪ್ರತಿ ಸಭೆಯಲ್ಲೂ ಸರ್ಕಾರಿ ಬಸ್ಸುಗಳ ಕೊರತೆ ಬಗ್ಗೆ ಚರ್ಚೆ, ಕ್ರಮವೇನು ಇಲ್ಲ, ಅನುಷ್ಠಾನ ಸಮಿತಿ ಸದಸ್ಯರ ಅಸಮಾಧಾನ



ರಾಮನಗರ: ಪ್ರಯಾಣಿಕರ ದಟ್ಟಣೆ ಹೆಚ್ಚಾಗಿರುವ ಸಂದರ್ಭದಲ್ಲಿ ಮತ್ತು ಅವಶ್ಯಕತೆಗೆ ತಕ್ಕಂತೆ ಹೆಚ್ಚುವರಿ ಬಸ್ಸುಗಳನ್ನು ನಿಯೋಜಿಸುವಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ಸೆ.16ರ ಬುಧವಾರ ನಗರದ ಜಿಲ್ಲಾ ಪಂಚಾ ಯತ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಲ್ಲೆಯಲ್ಲಿ ಅವಶ್ಯಕ ಬಸ್ ವ್ಯವಸ್ಥೆ ಕಲ್ಪಿಸುವುದರಿಂದ ವಿದ್ಯಾರ್ಥಿಗಳು, ಮಹಿಳೆಯರು ಸೇರಿದಂತೆ ಎಲ್ಲರಿಗೂ ಅನುಕೂಲವಾಗಲಿದೆ ಎಂದರು. ಸಮರ್ಪಕ ಬಸ್ಸುಗಳ ವ್ಯವಸ್ಥೆ ಇಲ್ಲದ ಕಾರಣ ದಿನನಿತ್ಯ ಉದ್ಯೋಗಕ್ಕೆ ತೆರಳುವವರು, ವಿದ್ಯಾರ್ಥಿಗಳು, ಮಹಿಳೆಯರು ಹೆಚ್ಚಿನ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಪ್ರತಿ ಸಭೆಯಲ್ಲೂ ಈ ವಿಚಾರಗಳು ಚರ್ಚೆಗೆ ಬರುತ್ತಿವೆ. ಆದರೆ ಏನೊಂದು ಕ್ರಮವೂ ಆಗಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಆಯಾ ತಾಲ್ಲೂಕುಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರುಗಳು ದೂರಿದರು.

**ಸಭೆಗೆ ಕೆ.ಎಸ್.ಆರ್.ಟಿ.ಸಿ ಡಿಸಿ ಅವರನ್ನು ಕರೆಸಿದ ಅಧ್ಯಕ್ಷರು**

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಅಧ್ಯಕ್ಷರು ಕೆಎಸ್ಆರ್‌ಟಿಸಿ ಡಿಸಿ ಅವರನ್ನು ಸಭೆಗೆ ಬರುವಂತೆ ಸೂಚನೆ ಕೊಟ್ಟರು. ಅವರ ಆಗಮನದ ನಂತರ ಅವರನ್ನು ಉದ್ದೇಶಿಸಿದ ಅಧ್ಯಕ್ಷರು, ಜಿಲ್ಲೆಯಲ್ಲಿ ಅವಶ್ಯವಿರುವ ಗ್ರಾಮಗಳಿಗೆ ಸಮರ್ಪಕ ಬಸ್ ವ್ಯವಸ್ಥೆ ಹಾಗೂ ಜನದಟ್ಟಣೆ ಸಮಯದಲ್ಲಿ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಬೇಕು ಎಂದರು.

ಮಾಗಡಿಯಿಂದ ಬೆಂಗಳೂರಿಗೆ, ರಾಮನಗರದಿಂದ ಬೆಂಗಳೂರಿಗೆ, ಚನ್ನಪಟ್ಟಣದಿಂದ ಬೆಂಗಳೂರಿಗೆ ಹಾಗೂ ಕುಣಿಗಲ್‌ನಿಂದ ಮಾಗಡಿಗೆ, ಹುಲಿಯೂರು ದುರ್ಗದಿಂದ ಮಾಗಡಿಗೆ ಹಾಗೂ ಹೆಚ್ಚುವರಿ ಬಸ್ ಸೌಲಭ್ಯ ಒದಗಿಸುವಂತೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು. ಜನದಟ್ಟಣೆ ಹೆಚ್ಚಿರುವ ಸಂದರ್ಭದಲ್ಲಿ ಪ್ರಯಾಣಿಕರಿಗೆ ಅನುಕೂಲಕ್ಕೆ ತಕ್ಕಂತೆ ಹೆಚ್ಚುವರಿ ಬಸ್‌ಗಳನ್ನು ಓಡಿಸಬೇಕೆಂದರು. ಪ್ರಯಾಣಿಕರ ದಟ್ಟಣೆ: ಡಿಪೋ ಮ್ಯಾನೇಜರ್‌ಗಳು ಗಮನಿಸಬೇಕು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ಅವಶ್ಯವಿರುವ ಗ್ರಾಮಗಳಿಗೆ ಬಸ್ ವ್ಯವಸ್ಥೆ ಹಾಗೂ ಜನದಟ್ಟಣೆ ಸಮಯದಲ್ಲಿ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಬೇಕು. ಜಿಲ್ಲೆಯ ಆಯಾ ಡಿಪೋ ಮ್ಯಾನೇಜರ್‌ಗಳು ಪ್ರಯಾಣಿಕರ ದಟ್ಟಣೆಯ ಅವಧಿಯಲ್ಲಿ ಕಡ್ಡಾಯವಾಗಿ ಖುದ್ದು ಹಾಜರಾಗಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಿ ಜನರಿಗೆ ಅನುಕೂಲವಾಗುವಂತೆ ಅವಶ್ಯಕತೆಯಿದ್ದಲ್ಲಿ ಹೆಚ್ಚುವರಿ ವಾಹನಗಳನ್ನು ಕಾರ್ಯಾಚರಿಸುವಂತೆ ಸೂಚಿಸಿದ ಅವರು ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಗೆ ಆಯಾ ತಾಲ್ಲೂಕಿನ ಡಿಪೋ ಮ್ಯಾನೇಜರುಗಳು ಭಾಗವಹಿಸಿ, ಚರ್ಚಿಸುವ ವಿಷಯಗಳ ಬಗ್ಗೆ ಸೂಕ್ತ ಕ್ರಮ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗೆ ನಿರ್ದೇಶಿಸಿದರು.

ಮಾಗಡಿ, ಚನ್ನಪಟ್ಟಣ, ರಾಮನಗರಕ್ಕೆ ಹೆಚ್ಚು ಬಿಎಂಟಿಸಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕ್ರಮ ವಹಿಸಬೇಕು. ಶಕ್ತಿ ಯೋಜನೆಯಡಿ 2023ರ ಜೂನ್ ಮಾಹೆಯಿಂದ 2026ರ ಆಗಸ್ಟ್ ಮಾಹೆಯವರೆಗೆ ಜಿಲ್ಲೆಯಲ್ಲಿ ಇದುವರೆಗೂ 13,24,29,488 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ ಅವರ ಪ್ರಯಾಣ ದರದ ಮೊತ್ತ 397,94,89,226 ರೂಪಾಯಿಗಳಾಗಿವೆ ಎಂದರು.

**ಮಳೆ ಕೊರತೆ: ಲೋಡ್ ಶೆಡ್ಡಿಂಗ್**

ಮಳೆ ಕೊರತೆಯಿಂದಾಗಿ ಸೆಪ್ಟೆಂಬರ್ ಮಾಹೆಯಲ್ಲಿಯೇ ವಿದ್ಯುತ್ ಲೋಡ್ ಶೆಡ್ಡಿಂಗ್ ಆರಂಭವಾಗಿದೆ. ತೆಂಗು, ಅಡಿಕೆ ಬೆಳೆ ಒಣಗುತ್ತಿದೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಲೋಡ್ ಶೆಡ್ಡಿಂಗ್ ಅವಧಿಯನ್ನು ಕಡಿಮೆಗೊಳಿಸಬೇಕು. ಮುಂದಿನ ದಿನಗಳಲ್ಲಿ ವಿದ್ಯುತ್ ಸಮಸ್ಯೆ ಇನ್ನಷ್ಟು ತೀವ್ರಗೊಳ್ಳಲಿದೆ. ವಿದ್ಯುತ್ ಸ್ಥಗಿತಗೊಳ್ಳುವುದನ್ನು ತಡೆಯಲು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು. ಸೋಲಾರ್ ಬಳಕೆಗೆ ಉತ್ತೇಜನ ನೀಡುವಂತೆ ಬೆಸ್ಕಾಂನ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,33,724 ಮಂದಿ ನೋಂದಾಯಿಸಿಕೊಂಡಿದ್ದು, ಈ ಯೋಜನೆ ಪ್ರಾರಂಭವಾದಾಗಿನಿಂದ ಇದುವರೆಗೂ ಒಟ್ಟಾರೆ 470.92 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ ಎಂದರು.

ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ 2,94,399 ಅರ್ಹ ಫಲಾನುಭವಿಗಳ ಪೈಕಿ 2,82,393 (95.92%) ಫಲಾನುಭವಿಗಳು ನೋಂದಣಿಯಾಗಿದ್ದು, ಉಳಿದ 12,006 (4.08%) ಫಲಾನುಭವಿಗಳ ನೋಂದಣಿಗೆ ಬಾಕಿ ಇರುತ್ತದೆ. 32 ಕಂತುಗಳಲ್ಲಿ ಅಂದರೆ 2026ರ ಜೂನ್ ಮಾಹೆಯವರೆಗೆ 2,58,272 ಫಲಾನುಭವಿಗಳಿಗೆ 1689,45,88,000 ಹಣ ಪಾವತಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಅನ್ನಭಾಗ್ಯ ಯೋಜನೆಯಡಿ 2025ರ ಫೆಬ್ರವರಿ ಮಾಹೆಯಿಂದ 2026ರ ಸೆಪ್ಟೆಂಬರ್ ಮಾಹೆಯವರೆಗೆ 1,89,11,434 ಪಡಿತರ ಚೀಟಿ ಫಲಾನುಭವಿಗಳಿಗೆ ಒಟ್ಟು 8,62,440 ಕ್ವಿಂಟಾಲ್ ಅನ್ನಭಾಗ್ಯ ಅಕ್ಕಿ ಹಂಚಿಕೆ ಮಾಡಲಾಗಿದೆ ಹಾಗೂ ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ ಸೆ.09ರ ವರೆಗೆ ಒಟ್ಟು 5,331 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಎಂದು ತಿಳಿಸಿದರು. ಸಮಿತಿಯ ಉಪಾಧ್ಯಕ್ಷರಾದ ಮಹದೇಶ್, ಶಿವಪ್ರಸಾದ್, ಸಿದ್ದೇಗೌಡ, ಸದಸ್ಯರು ಹಾಗೂ ರಾಮನಗರ ತಾಲ್ಲೂಕು ಅಧ್ಯಕ್ಷರಾದ ರಾಜು ವಿ.ಎಚ್., ಸದಸ್ಯರಾದ ಬೆಳ್ಳಿಯಪ್ಪ, ಸ್ವಾಮಿ, ಮಹದೇವ್, ವನಜಾ, ಶೋಭ, ಕಾಳಮ್ಮ ಸೇರಿದಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್, ಅಧಿಕಾರಿಗಳು ಉಪಸ್ಥಿತರಿದ್ದರು.

# ಸಾಲ ನೀಡದ ಎಂಡಿಸಿಸಿ ಬ್ಯಾಂಕ್ ವಿರುದ್ಧ ರೈತರ ಆಕ್ರೋಶ

**ಶಾಸಕರ ಎದುರೇ ವಿಷ ಸೇವಿಸಲು ಯತ್ನ, ಪೊಲೀಸರಿಂದ ರಕ್ಷಣೆ**



ಮೈಸೂರು: ಸಮಯಕ್ಕೆ ಸರಿಯಾಗಿ ರೈತರಿಗೆ ಸಾಲ ನೀಡದಿರುವುದನ್ನು ಖಂಡಿಸಿ ಪಿರಿಯಾಪಟ್ಟಣ?ಹುಣಸೂರು ಭಾಗದ ರೈತರು ಪ್ರತಿಭಟನೆ ನಡೆಸಿದ ವೇಳೆ ಸಾಲ ಸಿಗದ ರೈತನೊಬ್ಬ ವಿಷದ ಬಾಟಲಿ ಹಿಡಿದು ಆತ್ಮಹತ್ಯೆಗೆ ಮುಂದಾದರು. ತಕ್ಷಣ ಪೊಲೀಸರು ಬಾಟಲಿ ಕಿತ್ತುಕೊಂಡು ಅನಾಹುತ ತಪ್ಪಿಸಿದರೆ, ಶಾಸಕ ಜಿ.ಡಿ. ಹರೀಶ್ ಗೌಡ ಅವರು ರೈತರನ್ನು ಸಮಾಧಾನಪಡಿಸಿದರು.

ನಗರದ ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು, ಸಾಲ ಮಂಜೂರು ಮಾಡದ ಬ್ಯಾಂಕ್ ಅಧಿಕಾರಿಗಳ ನಡೆಯನ್ನು ಖಂಡಿಸಿ ತೀವ್ರ ಅಸಮಾ ಧಾನ ವ್ಯಕ್ತಪಡಿಸಿದರು. ಸಾಲ ಮರುಪಾವತಿ ಮಾಡಿದರೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಬ್ಯಾಂಕ್‌ಗಳು ರೈತರಿಗೆ ಮರುಸಾಲ ನೀಡಲು ಹಿಂದೇಟು ಹಾಕಲಾಗುತ್ತಿದೆ. ಹಳೆಯ ಸಾಲಗಳನ್ನು ತೀರಿಸಿದ್ದರೂ ಹಲವು ರೈತರಿಗೆ ಮತ್ತೆ ಸಾಲ ಪಾವತಿಸುವಂತೆ ಬಾಕಿ ನೋಟಿಸ್ ನೀಡಿರುವುದು ಖಂಡನೀಯ ಎಂದರು.

**ಬ್ಯಾಂಕ್ ವಿರುದ್ಧ ಆರೋಪ**

ಸಹಕಾರ ಕ್ಷೇತ್ರದ ಬ್ಯಾಂಕ್ ರೈತರ ನೆರವಿಗೆ ನಿಲ್ಲಬೇಕಾದರೆ, ಸಾಲ ನೀಡುವ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪ ನಡೆಯುತ್ತಿದೆ. ಕೃಷಿ ಚಟುವಟಿಕೆಗಳಿಗೆ ಬ್ಯಾಂಕ್ ಸಾಲವನ್ನೇ ಪ್ರಮುಖವಾಗಿ ಅವಲಂಬಿಸಿರುವ ರೈತರು, ಹೊಸ ಸಾಲ ದೊರೆಯದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಕ್ಷದ ಆಧಾರದಲ್ಲಿ ಸಾಲ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ರಾಜಕೀಯ ಒತ್ತಡ ಹಾಗೂ ಲಂಚ ನೀಡಿದವರಿಗೆ ಮಾತ್ರ ತಕ್ಷಣ ಸಾಲ ಸಿಗುತ್ತಿದೆ. ರೈತರಿಗೆ ಸಹಕಾರ ನೀಡಬೇಕಾದ ಎಂಡಿಸಿಸಿ ಬ್ಯಾಂಕ್ ಅಧಿಕಾರಿಗಳು ಪಿರಿಯಾಪಟ್ಟಣ ಶಾಸಕರ ಕೈಗೊಂಬೆಯಾಗಿದ್ದು, ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

**ವಿಷ ಸೇವನೆಗೆ ಯತ್ನ**

ಪ್ರತಿಭಟನೆ ವೇಳೆ ನಂದಿನಾಥಪುರದ ರೈತ ರಂಗಸ್ವಾಮಿ ವಿಷದ ಬಾಟಲಿ ಹಿಡಿದು ಆತ್ಮಹತ್ಯೆಗೆ ಯತ್ನಿಸಿದರು. ಇದರಿಂದ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕೂಡಲೇ ಎಚ್ಚೆತ್ತ ಪೊಲೀಸರು ಆತ್ಮಹತ್ಯೆಗೆ ಯತ್ನಿಸಿದ ರೈತನ ಕೈಯಲ್ಲಿದ್ದ ವಿಷದ ಬಾಟಲಿಯನ್ನು ವಶಕ್ಕೆ ಪಡೆದರು. ಬಳಿಕ ಶಾಸಕ ಜಿ.ಡಿ. ಹರೀಶ್ ಗೌಡ ಅವರು ರೈತರೊಂದಿಗೆ ಮಾತುಕತೆ ನಡೆಸಿ, ಸಮಾಧಾನಪಡಿಸಿದರು.

**ತಾಳಿ ಮಾರಿ ಸಾಲ ಕಟ್ಟಿದ್ದೇವೆ**

ಪ್ರತಿಭಟನೆಯಲ್ಲಿ ರೈತರು ತಮ್ಮ ಅಸಮಾಧಾನವನ್ನು ತೀವ್ರವಾಗಿ ವ್ಯಕ್ತಪಡಿಸಿದರು. "ತಾಳಿ ಮಾರಿ ಸಾಲ ಕಟ್ಟಿದ್ದೇವೆ. ಕಾಲಕಾಲಕ್ಕೆ ಪಡೆದ ಸಾಲವನ್ನು ಮರುಪಾವತಿ ಮಾಡಿದ್ದರೂ ನಮಗೆ ಹೊಸ ಸಾಲ ನೀಡುತ್ತಿಲ್ಲ. ಬ್ಯಾಂಕ್ ಸಾಲ ನಂಬಿಕೊಂಡು ಬೆಳೆ ಬೆಳೆಯುತ್ತಿದ್ದೇವೆ. ಆದರೆ ಈಗ ಸಾಲ ನೀಡದೇ ಬ್ಯಾಂಕ್ ಸಿಬ್ಬಂದಿ ಅನಗತ್ಯವಾಗಿ ಸತಾಯಿಸುತ್ತಿದ್ದಾರೆ. ನಮಗೆ ಸಾಲ ನೀಡದಿದ್ದರೆ ಏನು ಮಾಡಬೇಕು? ವಿಷ ಕುಡಿದು ಸಾಯಬೇಕಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ.ಮಹದೇವ್, ಪ್ರಸನ್ನ ಭಾಗವಹಿಸಿದ್ದರು.

## ಸಮಸ್ಯೆ ಆಲಿಸಿದ ಜಿಡಿಎಚ್

**ರೈತರು ಪ್ರತಿಭಟನೆ ನಡೆಸುತ್ತಿರುವ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ ಅವರು, ರೈತರ ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವಲ್ಲಿ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದರು. ಈ ವೇಳೆ ರೈತರ ಅಹವಾಲು ಆಲಿಸಿದ ಜಿ.ಟಿ. ಹರೀಶ್ ಗೌಡ ಅವರು, ಆತ್ಮಹತ್ಯೆಯಂತಹ ತೀರ್ಮಾನ ಕೈಗೊಳ್ಳದಂತೆ ಮನವಿ ಮಾಡಿದರು.**

# ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳಿ



ಗುಂಡ್ಲುಪೇಟೆ: ಪಟ್ಟಣದ ಡಿ. ದೇವರಾಜ ಅರಸು ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ನಡೆಯುವ ತಾಲೂಕು ಮಟ್ಟದ ಕ್ರೀಡಾ ಕೂಟಕ್ಕೆ ಶಾಸಕ ಎಚ್.ಎಂ. ಗಣೇಶ ಪ್ರಸಾದ್ ಚಾಲನೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಗಣೇಶ ಪ್ರಸಾದ್, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜತೆಗೆ ಹೆಚ್ಚಿನ ರೀತಿಯಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳ ಆರೋಗ್ಯ ಉತ್ತಮವಾಗುವುದರ ಜತೆಗೆ ದೈಹಿಕ ಕ್ಷಮತೆ ಹಾಗೂ ಫಿಸಿಕಲ್ ಫಿಟ್ನೆಸ್‌ಗೂ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಹೇಳಿದರು.

ಇಂದಿನ ಜನರೇಷನ್‌ಗೆ ಕ್ರೀಡಾ ಕ್ಷೇತ್ರದಲ್ಲಿ ಬೆಳೆಯಲು ಸಾಕಷ್ಟು ಅವಕಾಶಗಳು ಹಾಗೂ ಉತ್ತಮ ವ್ಯವಸ್ಥೆಗಳು ಲಭ್ಯವಿವೆ. ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು. ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ಶಿಸ್ತು, ಆತ್ಮವಿಶ್ವಾಸ ಹಾಗೂ ತಂಡದ ಮನೋಭಾವ ಬೆಳೆಸಿಕೊ ಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿಗಳಲ್ಲಿ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟಗಳು ಪ್ರಮುಖವಾಗಿವೆ. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ತಾಲೂಕಿಗೆ ಹಾಗೂ ಜಿಲ್ಲೆಗೆ ಕೀರ್ತಿ ತರಬೇಕು ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಗ್ಯಾರಂಟಿ ಸಮಿತಿ ಅಧ್ಯಕ್ಷ ಉಮಾಪತಿ, ಎಸ್. ರಾಜಶೇಖರ್, ದಿನೇಶ್ ಹಲವರು ಉಪಸ್ಥಿತರಿದ್ದರು.

# ಇಂಜಿನಿಯರ್‌ಗಳ ಕೊಡುಗೆ ಅಪಾರ



ಚಾಮರಾಜನಗರ: ದೇಶಕ್ಕೆ ಇಂಜಿನಿಯರ್‌ಗಳ ಕೊಡುಗೆ ಅಪಾರವಾಗಿದೆ' ಎಂದು ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಹೇಳಿದರು.

ನಗರದ ರೋಟರಿ ಭವನದಲ್ಲಿ ನಡೆದ ರೋಟರಿ ಸಂಸ್ಥೆ ವತಿಯಿಂದ ನಡೆದ ಇಂಜಿನಿಯರ್ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತದ ಮಹಾನ್ ಇಂಜಿನಿಯರ್, ಭಾರತರತ್ನ ಮೋಕ್ಷಗುಂಡಂವಿಶ್ವೇಶ್ವರಯ್ಯ ಅವರ ಜನ್ಮದಿನದ ನೆನಪಿಗಾಗಿ ಇಂಜಿನಿಯರ್ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಭಾರತ ಸರ್ಕಾರವು 1986ರಲ್ಲಿ ಸೆ.15 ನ್ನು ರಾಷ್ಟ್ರೀಯ ಇಂಜಿನಿಯರ್ ದಿನವೆಂದು ಘೋಷಿಸಿದೆ ಎಂದರು.

ದೇಶದ ಮೂಲಭೂತ ಸೌಲಭ್ಯ, ನೀರಾವರಿ ವ್ಯವಸ್ಥೆ, ಸುಂದರ ಕಟ್ಟಡಗಳ ನಿರ್ಮಾಣ ಕೈಗಾರಿಕಾ ಅಭಿವೃದ್ಧಿಗೆ ಇಂಜಿನಿಯರ್ ಗಳು ಅಪಾರ ಕೊಡುಗೆ ನೀಡಿದ್ದಾರೆ. ಅವರ ಸೇವೆಯನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ' ಎಂದರು. ಸನ್ಮಾನ ಸ್ವೀಕರಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರಾದ ವಿ.ರಮೇಶ್ ಮಾತನಾಡಿ, ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯು ಇಂಜಿನಿಯರ್‌ಗಳ ಸೇವೆಯನ್ನು ಗುರುತಿಸಿ ತಮ್ಮಗಳನ್ನು ಸನ್ಮಾನಿಸಿ ತಮ್ಮಗಳ ಜವಾಬ್ದಾರಿಯನ್ನು ಹೆಚ್ಚು ಮಾಡಿದೆ ಎಂದರು.

**ಸನ್ಮಾನ:** ಸಹಾಯಕ ಕಾರ್ಯಪಾಲಕ ಅಭಿಯಂತರಾದ ವಿ.ರಮೇಶ್, ಹರದನಹಳ್ಳಿ ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿ. ಧ್ರುಪದ್, ಕಿರಿಯ ಇಂಜಿನಿಯರ್ ಎಸ್.ಮಂಜುನಾಥ್, ರೋಟರಿ ಸಂಸ್ಥೆಯ ಇಂಜಿನಿಯರ್‌ಗಳಾದ ಮೋಹನ್, ರಾಜುವರ್ಗೀಸ್, ಪ್ರವೀಣ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥಾಪಕ ಸದಸ್ಯರಾದ ಜಿ.ಆರ್. ಅಶ್ವಥನಾರಾಯಣ್, ಸಿ.ವಿ.ಶ್ರೀನಿವಾಸಶೆಟ್ಟಿ,ಕಾರ್ಯದರ್ಶಿ ಅಂಕಶೆಟ್ಟಿ, ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

# ಸಂವಿಧಾನದ ಆಶಯ ಈಡೇರಿಸಿ

## ಪ್ರಜಾಪ್ರಭುತ್ವದ ಬಲವರ್ಧನೆಗೆ ಸಚಿವ ಸಿ. ಪುಟ್ಟರಂಗಶೆಟ್ಟಿ ಅಭಿಮತ



ಚಾಮರಾಜನಗರ: ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಜಿಲ್ಲಾಡಳಿತ ಭವನದ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಸಾಂಸ್ಕೃತಿಕ ನಾಯಕ ಬಸವಣ್ಣನವರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ತದನಂತರ ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭಾರತ ಸಂವಿಧಾನದ ಪ್ರಮುಖ ಆಶಯಗಳಾಗಿರುವ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ಸಾಮಾಜಿಕ ನ್ಯಾಯ ಹಾಗೂ ಮುಕ್ತ ಚುನಾವಣೆ ಅಂಶಗಳನ್ನು ಪ್ರಜಾಪ್ರಭುತ್ವದಲ್ಲಿ ಅಡಕಗೊಳಿಸಲಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಮೊದಲ ಸಂಸತ್ತು ಸ್ಥಾಪಿಸಿದ್ದರು ಹಾಗೂ ಅಬ್ರಹಾಂ ಲಿಂಕನ್ ಆಧುನಿಕ ಜಗತ್ತಿನ ಮೊದಲ ಪ್ರಜಾಪ್ರಭುತ್ವ ಜಾರಿಗೊಳಿಸಿದ್ದರು. ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚಿಸಿ ಸಾಮಾಜಿಕ ನ್ಯಾಯದಡಿ ಎಲ್ಲರಿಗೂ ಸಮಾನತೆ ಒದಗಿಸಲು ಮುಂದಾಗಿದ್ದು, ಅವರ ಆಶಯಗಳನ್ನು ಈಡೇರಿಸಲು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರತಿಯೊಬ್ಬ ನಾಗರಿಕರು ಮುಂದಾಗಬೇಕು ಎಂದು ಅವರು ಕರೆ ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನ) ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಅವರು ಕಾರ್ಯಕ್ರಮದಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯ ಮಹತ್ವದ ಬಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಬಿ.ಎಸ್. ರಾಜು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಸೋಮೇಶ್ವರ, ತಹಶೀಲ್ದಾರ್ ಬಿ. ಗಿರಿಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

### ಸಂವಿಧಾನದ ಮಹತ್ವ, ಯುವಜನತೆಯ ಕರ್ತವ್ಯ

**ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಅವರು ಮಾತನಾಡಿ, ಭಾರತವು ಪ್ರಪಂಚದಲ್ಲಿಯೇ ಬೃಹತ್ ಪ್ರಜಾಪ್ರಭುತ್ವ ಹಾಗೂ ಶ್ರೇಷ್ಠ ಸಂವಿಧಾನ ಹೊಂದಿರುವ ದೇಶವಾಗಿದೆ. ದೇಶದಲ್ಲಿ ನಾವೆಲ್ಲರೂ ಶಾಂತಿ, ನೆಮ್ಮದಿಯಿಂದ ಬದುಕಲು ಅಂಬೇಡ್ಕರ್ ರಚಿಸಿದ ಸಂವಿಧಾನವೇ ಕಾರಣವಾಗಿದೆ. ಪ್ರಜಾಪ್ರಭುತ್ವದಡಿ ಕಾನೂನಿನ ಚೌಕಟ್ಟಿನೊಳಗೆ ಎಲ್ಲರೂ ಸಮಾನರಾಗಿದ್ದು, ಸಮಾನತೆ, ಜಾತ್ಯತೀತ ಮನೋಭಾವದಿಂದ ಸ್ತ್ರೀಸಾಮಾನ್ಯರ ಹಕ್ಕುಗಳನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇಂದಿನ ಯುವಕರು ಹಾಗೂ ವಿದ್ಯಾರ್ಥಿಗಳು ಸಂವಿಧಾನದ ಬಗ್ಗೆ ಹೆಚ್ಚಿನ ಅರಿವು ಪಡೆಯಲು ಗ್ರಂಥಾಲಯಗಳಲ್ಲಿ ಹೆಚ್ಚಿನ ಸಮಯ ಕಳೆಯಬೇಕು ಎಂದು ಸಲಹೆ ನೀಡಿದರು.**

### ಪ್ರಜಾಪ್ರಭುತ್ವ ದಿನದ ಇತಿಹಾಸ, 'ಯುವ ಸಂಸತ್ತು' ರಚನೆ

**ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಭೋಗಾಪುರದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಪಿ. ದೇವರಾಜು ಅವರು ಮಾತನಾಡಿ, 1997ರಲ್ಲಿ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ಅಗತ್ಯತೆ ಬಗ್ಗೆ ಅಧ್ಯಯನ ನಡೆಸಲು ಸಮಿತಿ ರಚಿಸಿ, 1998ರಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲು ಶಿಫಾರಸು ಮಾಡಲಾಗಿತ್ತು ಹಾಗೂ 2008ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಈ ದಿನವನ್ನು ಆಚರಿಸಲಾಯಿತು ಎಂದರು. ಕರ್ನಾಟಕ ಸರ್ಕಾರವು 2024ರಲ್ಲಿ ಮೊದಲ ಬಾರಿಗೆ ಪ್ರಜಾಪ್ರಭುತ್ವ ದಿನಾಚರಣೆ ಆಯೋಜಿಸಿ ಬೀದರ್‌ನಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ರಚಿಸಿ ಗಮನ ಸೆಳೆದಿತ್ತು. ಪ್ರಸ್ತುತ 2026ರಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ರಾಜ್ಯ ಸರ್ಕಾರವು ಎಲ್ಲಾ ಶಾಲಾ-ಕಾಲೇಜುಗಳಲ್ಲಿ 'ಯುವ ಸಂಸತ್ತು' ರಚನೆಯ ಮೂಲಕ ಮಕ್ಕಳಿಗೆ ವಿಧಾನಸಭೆಯ ಕಾರ್ಯಕಲಾಪಗಳನ್ನು ವಿದ್ಯಾರ್ಥಿ ಹಂತದಲ್ಲಿಯೇ ಪರಿಚಯಿಸುವ ಮಹತ್ವದ ಕಾರ್ಯ ಕೈಗೊಂಡಿದೆ ಎಂದು ಅವರು ವಿವರಿಸಿದರು. ಪ್ರಜಾಪ್ರಭುತ್ವದ ಯಶಸ್ಸಿಗೆ ಜನರು ಸಕ್ರಿಯವಾಗಿ ಪಾಲ್ಗೊಂಡು ಹಕ್ಕುಗಳನ್ನು ಪ್ರತಿಪಾದಿಸಬೇಕು ಎಂದು ತಿಳಿಸಿದರು.**

**ಬಡಗಲಪುರದಲ್ಲಿ ಹುಲಿ ದಾಳಿಗೆ ರೈತ ಬಲಿ**

# ಘಟನಾ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಭೇಟಿ, ಪರಿಶೀಲನೆ



ಚಾಮರಾಜನಗರ. ತಾಲೂಕಿನ ಬಡಗಲಪುರ ಗ್ರಾಮದಲ್ಲಿ ಹುಲಿ ದಾಳಿಗೆ ರೈತ ಬಸವಣ್ಣ ಬಲಿಯಾದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇದೇವೇಳೆ ಅವರು ಮೃತ ರೈತನ ಕುಟುಂಬಕ್ಕೆ ಸರ್ಕಾರದ ವತಿಯಿಂದ 5 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಉಳಿದ 15 ಲಕ್ಷ ಪರಿಹಾರವನ್ನು ಕೊಡಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು. ಇಂದಿನ ಪರಿಸ್ಥಿತಿಯಲ್ಲಿ 20 ಲಕ್ಷ ಪರಿಹಾರವೂ ಸಾಕಾಗುವುದಿಲ್ಲ. ಮೃತ ರೈತನ ಕುಟುಂಬದ ಪರಿಸ್ಥಿತಿಯನ್ನು ಪರಿಗಣ ಸಿ ಪರಿಹಾರದ ಮೊತ್ತವನ್ನು ಹೆಚ್ಚಿಸುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ರೈತನನ್ನು ಬಲಿತೆಗೆದುಕೊಂಡ ಹುಲಿಯನ್ನು ಸೆರೆ ಹಿಡಿಯಲು ಇಂದಿನಿಂದಲೇ ಸಾಕಾನೆಗಳನ್ನು ಹಾಗೂ ಅರವಳಿಕೆ ತಜ್ಞರನ್ನು ಕರೆಸಿ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುವುದು ಎಂದು ಹೇಳಿದರು.

ಮೃತ ರೈತನ ಪತ್ನಿಗೆ ಪ್ರತಿ ತಿಂಗಳು 4 ಸಾವಿರ ಮಾಶಾಸನ ನೀಡುವ ವ್ಯವಸ್ಥೆ ಮಾಡಲಾಗುವುದು. ಮೃತ ರೈತನಿಗೆ ನಾಲ್ವರು ಮಕ್ಕಳಿದ್ದು, ಅವರಲ್ಲಿ ಒಬ್ಬರಿಗೆ ಪಶುಸಂಗೋಪನೆ ಇಲಾಖೆಯಲ್ಲಿ ಡಿ-ಗ್ರೂಪ್ ನೌಕರಿ ಹಾಗೂ ಮತ್ತೊಬ್ಬ ಮಗನಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕೊಡಿಸುವ ಭರವಸೆ ನೀಡಿದರು.

**ವಿಶ್ವ ಆತ್ಮಹತ್ಯೆ ತಡೆದಿನಾಚರಣೆ ಕಾರ್ಯಕ್ರಮ**

# ಆತ್ಮಹತ್ಯೆ ಮುಕ್ತ ಮಾಡಲು ಪಣ ತೊಡಿ



ಚಾಮರಾಜನಗರ: ಆತ್ಮಹತ್ಯೆ ತಡೆಗಟ್ಟಲು ಸಮಾಜದಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮತ್ತು ಅರಿವು ಮೂಡಿಸುವುದು ಅತ್ಯಂತ ಅವಶ್ಯಕವಾಗಿದೆ. ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಪಿ.ಚಂದ್ರ ಶೇಖರ್ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಮಹಿಳಾಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ವತಿಯಿಂದ ಆತ್ಮಹತ್ಯೆಯ ನಿರೂಪ ಣೆಯನ್ನು ಬದಲಾಯಿಸೋಣ' ಧ್ಯೇಯ ವಾಕ್ಯ ದಡಿ, ನಡೆದ 'ವಿಶ್ವ ಆತ್ಮಹತ್ಯೆ ತಡೆ ದಿನಾ ಚರಣೆಯನ್ನು ಗಿಡಕ್ಕೆ ನೀರಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶುಶ್ರೂಷಕರು ಆತ್ಮಹತ್ಯೆಗೆ ಪ್ರಯತ್ನ ಮಾಡುವವರ ಜತೆ ಸಮಾಲೋಚನೆ ನಡೆಸಿ, ಅವರಿಗೆ ಮಾನಸಿಕ ಆರೋಗ್ಯ ಅರಿವು ಕಾರ್ಯ ಕ್ರಮ ಆಯೋಜಿಸಬೇಕು, ಆ ಮೂಲಕ ಜಿಲ್ಲೆಯನ್ನು ಆತ್ಮಹತ್ಯೆ ಮುಕ್ತ ಮಾಡಲು ಪಣ ತೊಡಬೇಕು ಎಂದರು. ಸಮಸ್ಯೆಗಳಿಗೆ ಆತ್ಮಹತ್ಯೆಯೇ ಪರಿಹಾರವಲ್ಲ. ಸಕಾರಾತ್ಮಕ ಚಿಂತನೆಗಳು ಎಲ್ಲದಕ್ಕೂ ಸೂಕ್ತ ಪರಿ ಹಾರ ನೀಡುತ್ತವೆ.ಮಾನಸಿಕ ಖಿನ್ನತೆ ಒಂಟಿತನ, ಕೌಟುಂಬಿಕ ಕಲಹ ಇದರಲ್ಲಿ ಸಿಲುಕುವವರು ಆತ್ಮಹತ್ಯೆಗೆ ಶರಣಾಗುವ ಸಾಧ್ಯತೆ ಇದೆ. ಇಲಾಖೆ ಸಂಗ್ರಹಿಸಿರುವ ಅಂಕಿ ಅಂಕಿಅಂಶಗಳ ಪ್ರಕಾರ ಜುಲೈನಲ್ಲಿ ಗಂಡುಮಕ್ಕಳು-61 ಹೆಣ್ಣುಮಕ್ಕಳು-66, ಆಗಸ್ಟ್ ನಲ್ಲಿ ಗಂಡುಮಕ್ಕಳು -66, ಹೆಣ್ಣು ಮಕ್ಕಳು -70 ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆ ತಡೆಯುವ ನಿಟ್ಟಿನಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಜಿಲ್ಲೆಯ ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರತಿ ಮಂಗಳವಾರ, ಶುಕ್ರವಾರ, ಬುಧವಾರ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಮನೋಚೈತನ್ಯ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಆತ್ಮಹತ್ಯೆಗೆ ಪ್ರಯತ್ನಪಟ್ಟವರ ಜತೆ ಆಪ್ತಸಮಾಲೋಚನೆ ನಡೆಸುವ ಮೂಲಕ ಅವರ ಸಮಸ್ಯೆಗೆ ಪರಿಹಾರ ಕೊಡುವ ಪ್ರಯತ್ನ ಮಾಡಲಾಗುತ್ತಿದೆ ಎಂದರು. ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮನೋ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕರಾದ ಡಾ. ಶಿವಾನಂದ ಜೆ.ಮನೋಹರ್, ರಕ್ಷಿತಾಪೂಜಾರಿ ಮಾತನಾಡಿದರು. ಅಧ್ಯಕ್ಷ ತೆ ವಹಿಸಿದ್ದ ಪ್ರಾಂಶು ಪಾಲ ಜಿ.ವಿನಯಕುಮಾರ್ ಮಾತನಾಡಿದರು ಉಪನ್ಯಾಸಕಿ ಹೇಮಾವತಿ, ವಿದ್ಯಾರ್ಥಿಗಳು ಹಾಜರಿದ್ದರು. ವಿದ್ಯಾರ್ಥಿಗಳಾದ ನಿಧಿಶ್ರೀ ಪ್ರಾರ್ಥಿಸಿದರು.

# ನಾಲೆಗಳಿಗೆ 20 ದಿನ ನೀರು ಬಿಡಿ, ಕಬ್ಬಿನ ಬಾಕಿ ಹಣ ಕೂಡಲೇ ಪಾವತಿಸಿ: ಇಂಡುವಾಳು ಚಂದ್ರಶೇಖರ್

**ಮಂಡ್ಯ:** ಜಿಲ್ಲೆಯಲ್ಲಿ ತೀವ್ರ ಬರಗಾಲವಿದ್ದು ರೈತರ ಸಮಸ್ಯೆಗಳಿಗೆ ಸರ್ಕಾರ ಹಾಗೂ ಜನಪ್ರತಿನಿಧಿಗಳು ಸ್ಪಂದಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ)ದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕೆಆರ್‌ಎಸ್ ನಾಲೆಗಳಲ್ಲಿ ನೀರು ಪೂರ್ಣ ಪ್ರಮಾಣದಲ್ಲಿ ತಲುಪುತ್ತಿಲ್ಲ. ಈಗ ನೀಡುತ್ತಿರುವ ನೀರು ಸಾಲುತ್ತಿಲ್ಲ. ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಕಟ್ಟು ಪದ್ಧತಿ ನೀರನ್ನು 15 ದಿನದ ಬದಲು 20 ದಿನಗಳ ಕಾಲ ಹರಿಸಬೇಕು. ನಿಂತಿರುವ ಕಬ್ಬು, ತೆಂಗು, ರೇಷ್ಮೆ ಬೆಳೆ ರಕ್ಷಣೆಗೆ ಒತ್ತು ನೀಡಬೇಕು.ಜಿಲ್ಲೆಯ ಯಾವುದೇ ಕೆರೆ-ಕಟ್ಟೆಗಳಿಗೆ ನೀರು ತುಂಬಿಸಬೇಕು.ಮಳೆ ಅಭಾವದಿಂದ ಮದ್ದೂರು ಮತ್ತು ಪಾಂಡವಪುರ ತಾಲೂಕುಗಳು ಸಂಕಷ್ಟದಲ್ಲಿದ್ದು, ಅವುಗಳನ್ನು ಪೂರ್ಣ ಪ್ರಮಾಣದ ಬರ ಪೀಡಿತ ತಾಲೂಕುಗಳ ಪಟ್ಟಿಗೆ ಸೇರಿಸಬೇಕು. ಇಡೀ ರಾಜ್ಯದಲ್ಲಿ ಬರ ಘೋಷಿಸಿ ಎಕರೆಗೆ ರೂ.50,000 ಪರಿಹಾರ ಮತ್ತು ಸಂಪೂರ್ಣ ಸಾಲಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.




**ಸಕ್ಕರೆ ಕಾರ್ಖಾನೆಗಳ ವಿಳಂಬ ನೀತಿ:** ನೀರಿಲ್ಲದೆ ಬೆಳೆ ಬೆಳೆಯಬೇಡಿ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ, ಆದರೆ ಬೆಳೆ ಬೆಳೆಯದಿದ್ದರೆ ರೈತರು ಸೊಸೈಟಿ, ಬ್ಯಾಂಕ್ ಸಾಲ ಮತ್ತು ಬಡ್ಡಿಯನ್ನು ಹೇಗೆ ತೀರಿಸಬೇಕು ಎಂದು ಅವರು ಪ್ರಶ್ನಿಸಿದರು.ರಾಜ್ಯದಲ್ಲಿ 80 ಸಕ್ಕರೆ ಕಾರ್ಖಾನೆಗಳು 2 ತಿಂಗಳಿಂದ ಕಾರ್ಯಾರಂಭ ಮಾಡಿದ್ದರೂ, ಮಂಡ್ಯ ಜಿಲ್ಲೆಯ ಕಾರ್ಖಾನೆಗಳು ರೈತರು ಸರಬರಾಜು ಮಾಡಿದ ಕಬ್ಬಿಗೆ 14 ದಿನಗಳಲ್ಲಿ ನೀಡಬೇಕಿದ್ದ ಹಣವನ್ನು ತಿಂಗಳು ಕಳೆದರೂ ಪಾವತಿಸಿಲ್ಲ ಎಂದು ದೂರಿದರು.

ಮಂಡ್ಯ, ಶ್ರೀರಂಗಪಟ್ಟಣ, ಮೇಲುಕೋಟೆ ಶಾಸಕರು ಹಾಗೂ ಉಸ್ತುವಾರಿ ಸಚಿವರನ್ನೊಳಗೊಂಡ ಸಭೆ ನಡೆಸಿ ರೈತರ ಸಮಸ್ಯೆ ಬಗೆಹರಿಸಬೇಕು. ತಕ್ಷಣ ಸ್ಪಂದಿಸದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಅವರು ಎಚ್ಚರಿಸಿದರು.

**ಸೆ.18 ರಂದು ಕೊಪ್ಪ ಕಾರ್ಖಾನೆ ಮುತ್ತಿಗೆ:** ಕೀಳಘಟ್ಟ ನಂಜುಂಡಯ್ಯ

ನಂತರ ಮಾತನಾಡಿದ ರೈತ ಸಂಘದ ಜಿಲ್ಲಾ ಮುಖಂಡ ಕೀಳಘಟ್ಟ ನಂಜುಂಡಯ್ಯ ಅವರು, ಕೊಪ್ಪ ಎನ್.ಎಸ್.ಎಲ್ ಸಕ್ಕರೆ ಕಾರ್ಖಾನೆಯು ಸುಮಾರು 3.5 ಲಕ್ಷ ಟನ್ ಕಬ್ಬು ಅರೆದು ಒಂದೂವರೆ ತಿಂಗಳು ಕಳೆದರೂ ಬಾಕಿ ಹಣ ಪಾವತಿಸಿಲ್ಲ. ಸಕ್ಕರೆ ಕಾಯ್ದೆ ಪ್ರಕಾರ 14 ದಿನಗಳಲ್ಲಿ ಹಣ ಪಾವತಿಸಬೇಕು. ಕಾಯ್ದೆ ಉಲ್ಲಂಘನೆ ಖಂಡಿಸಿ ಶುಕ್ರವಾರ, 18ನೇ ತಾರೀಖು ಬೆಳಿಗ್ಗೆ 11:30 ಗಂಟೆಗೆ ಸುಮಾರು 5,000 ಕಬ್ಬು ಬೆಳೆಗಾರರು ಕಾರ್ಖಾನೆಗೆ ಮುತ್ತಿಗೆ ಹಾಕಲಿದ್ದಾರೆ ಎಂದು ತಿಳಿಸಿದರು.

**ವಿದ್ಯುತ್ ಮತ್ತು ಪ್ರಜಾಸೇವೆ ಸಮಸ್ಯೆ ಬಗೆಹರಿಸಿ:ಸೊ.ಸಿ ಪ್ರಕಾಶ್:** ಪತ್ರಿಕಾ ಕಾರ್ಯದರ್ಶಿ ಸೊ.ಸಿ. ಪ್ರಕಾಶ್ ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಿಗೆ ದಿನಕ್ಕೆ ಕೇವಲ 2.5 ರಿಂದ 3 ಗಂಟೆ ವಿದ್ಯುತ್ ನೀಡಲಾಗುತ್ತಿದೆ. ಶೀಘ್ರ ವಿದ್ಯುತ್ ಸಂಪರ್ಕ ನೀಡಬೇಕು. ಲೋಡ್ ಶೆಡ್ಡಿಂಗ್ ನೆಪದಲ್ಲಿ ವಿದ್ಯುತ್ ಕಡಿತ ನಿಲ್ಲಿಸಬೇಕು.

ತಾಲೂಕು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಕಚೇರಿಗಳಲ್ಲಿ ನೇರವಾಗಿ ಕೆಲಸ ಮಾಡದೆ ಪ್ರಜಾಸೇವೆ ಹೆಸರಿನಲ್ಲಿ ಅರ್ಜಿಗಳನ್ನು ಹಲವಾರು ದಿನಗಳ ಕಾಲ ಬಾಕಿ ಉಳಿಸಿಕೊಳ್ಳುತ್ತಿದ್ದಾರೆ. ಈ ವಿಳಂಬ ನೀತಿ ಕೈಬಿಟ್ಟು ಸಕಾಲದಲ್ಲಿ ಕುಂದುಕೊರತೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಮಂಜೇಶ್‌ಗೌಡ, ಉಪಾಧ್ಯಕ್ಷ ರಾಮಲಿಂಗೇಗೌಡ, ಯುವ ರೈತ ಅಧ್ಯಕ್ಷ ಕೋಡಿಶೆಟ್ಟಿಪುರ ತೇಜಸ್, ಜಿಲ್ಲಾ ಮುಖಂಡ ಚಂದ್ರಶೇಖರ್ ದೊಡ್ಡಪಾಳ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸೆ.17 ರಂದು ಶ್ರೀ ಭಗವಾನ್ ವಿಶ್ವಕರ್ಮ ಜಯಂತಿ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಭಗವಾನ್ ವಿಶ್ವಕರ್ಮ ಜಯಂತಿ ಕಾರ್ಯಕ್ರಮವು ಸೆಪ್ಟೆಂಬರ್, 17 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಷಿ ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಮಡಿಕೇರಿ ನಗರಸಭೆ ಅಧ್ಯಕ್ಷರಾದ ಕಲಾವತಿ ಪಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಟಿ.ಎಂ.ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ ಕೊಡಗು ಜಿಲ್ಲಾ ನಿರ್ದೇಶಕರಾದ ಕೆ.ಎಸ್.ಚಂದ್ರಶೇಖರ, ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷರಾದ ಎಸ್.ಜೆ.ದೇವದಾಸ್, ವಿಶ್ವಕರ್ಮ ಸಮಾಜ ಸೇವಾ ಸಂಘದ ಮಡಿಕೇರಿ ತಾಲ್ಲೂಕು ಅಧ್ಯಕ್ಷರಾದ ಬಿ.ಜಗದೀಶ್ ಆಚಾರ್ಯ, ಕೊಡಗು ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಪ್ರದಾನ ಕಾರ್ಯದರ್ಶಿ ಬಿ.ಬಿ.ನಾಗರಾಜು, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಸಹನ ಎಸ್.ಹಾದಿಮನಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಇತರರು ಪಾಲ್ಗೊಳ್ಳಲಿದ್ದಾರೆ. ಕುಶಾಲನಗರ ನಿವೃತ್ತ ಪ್ರಾಂಶುಪಾಲರಾದ ಎಚ್.ಬಿ.ಲಿಂಗಮೂರ್ತಿ ಉಪನ್ಯಾಸ ನೀಡಲಿದ್ದಾರೆ.

# ಮಿಮ್ಸ್ ಆಸ್ಪತ್ರೆ ಜಾಗದ ತೆರವು ಬಗ್ಗೆ ಡಿಸೆಂಬರ್ ಅಂತ್ಯದೊಳಗೆ ತೀರ್ಮಾನ

## ಕಾವೇರಿ ವಿವಾದಕ್ಕೆ ಮೇಕೆದಾಟು ಶಾಶ್ವತ ಪರಿಹಾರ- ಸಚಿವ ಎನ್.ಚಲುವರಾಯಸ್ವಾಮಿ

**ಮಂಡ್ಯ:** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಆಸ್ಪತ್ರೆಗೆ ಸೇರಿದ ಅಮೂಲ್ಯ ಜಾಗದ ಅಕ್ರಮ ಒತ್ತುವರಿಯನ್ನು ಡಿಸೆಂಬರ್ ಅಂತ್ಯದೊಳಗೆ ತೆರವುಗೊಳಿಸಿ, ಆಸ್ಪತ್ರೆಯ ಮೂಲ ಸೌಕರ್ಯ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಭರವಸೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕರೆದಿದ್ದ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮಿಮ್ಸ್ ಜಾಗದ ಒತ್ತುವರಿ ತೆರವುಗೊಳಿಸುವ ಬಗ್ಗೆ ನಡೆದ ಪ್ರತಿಭಟನೆ ಕುರಿತು ಮಾಹಿತಿ ಪಡೆದು, ಜಿಲ್ಲಾಧಿಕಾರಿಗಳು ಹಾಗೂ ಸಂಘಟನೆಯ ಮುಖಂಡರೊಂದಿಗೆ ಚರ್ಚಿಸಿದ್ದೇನೆ. ಇಂದು ಈ ಕುರಿತು ಸುದೀರ್ಘ ಸಭೆ ನಡೆಸಿ ಅಧಿಕಾರಿಗಳಿಂದ ಸಂಪೂರ್ಣ ವಿವರ ಪಡೆದುಕೊಂಡಿದ್ದೇನೆ.ಅಲ್ಲಿ ನಡೆದಿರುವ ಕಾನೂನುಬಾಹಿರ ಕ್ರಮಗಳು, ಅನಧಿಕೃತವಾಗಿ ಜಾಗವನ್ನು ಆಕ್ರಮಿಸಿಕೊಂಡಿರುವುದು ಹಾಗೂ ಪರ್ಯಾಯ ಜಾಗವನ್ನು ನೀಡಿದ್ದರೂ ಸ್ಥಳಾಂತರಗೊಳ್ಳದೆ ಆಸ್ಪತ್ರೆಗೆ ಅತ್ಯಂತ ಅನಿವಾರ್ಯವಾಗಿ ಬೇಕಾಗಿರುವ ಜಾಗಕ್ಕೆ ತೊಂದರೆ ಉಂಟುಮಾಡಿರುವುದು ಕಂಡುಬಂದಿದೆ. ಇದರಿಂದ ಇಡೀ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಜನರಿಗೆ ಅನುಕೂಲವಾಗಬೇಕಿದ್ದ ಆರೋಗ್ಯ ವ್ಯವಸ್ಥೆಗೆ ಧಕ್ಕೆಯಾಗಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

**ಡಿಸೆಂಬರ್ ಅಂತ್ಯದೊಳಗೆ ಕ್ರಮ:** ಈ ಪ್ರಕರಣವನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ವಿಚಾರದಲ್ಲಿ ಹೆಚ್ಚಿನ ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಡಿಸೆಂಬರ್ ಅಂತ್ಯದೊಳಗಾಗಿ ಇದಕ್ಕೆ ಅಂತಿಮ ಪರಿಹಾರ ಕಲ್ಪಿಸಲಾಗುವುದು. ಇದಕ್ಕಾಗಿ ಅಡ್ವೊಕೇಟ್ ಜನರಲ್ (ಎಜಿ) ಅವರನ್ನೇ ನೇಮಿಸಿ, ಪ್ರಕರಣದಲ್ಲಿರುವ ನ್ಯಾಯಾಲಯದ ತಡೆಯಾಜ್ಞೆಯನ್ನು




ತೆರವುಗೊಳಿಸಲು ಸಮರ್ಥವಾಗಿ ವಾದ ಮಂಡಿಸಲಾಗುವುದು. ಅವಶ್ಯಕತೆ ಬಿದ್ದರೆ ಹಿರಿಯ ನ್ಯಾಯವಾದಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಈ ಹಿಂದೆ ನಡೆದಿರುವ ಲೋಪದೋಷಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಹಾಗೂ ಶಾಶ್ವತವಾಗಿ ಆಸ್ಪತ್ರೆಯ ವಾತಾವರಣವನ್ನು ಸುಧಾರಿಸಲಾಗುವುದು.

**ಜಿಲ್ಲಾ ಆಸ್ಪತ್ರೆ ಉನ್ನತೀಕರಣಕ್ಕೆ ಸಂಕಲ್ಪ:** ಮುಂದಿನ ಮೂರು-ನಾಲ್ಕು ತಿಂಗಳಲ್ಲಿ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು, ಜಿಲ್ಲೆಯ ಎಲ್ಲ ಶಾಸಕರು ಹಾಗೂ ಕೃಷಿ ಸಚಿವ ನರೇಂದ್ರಸ್ವಾಮಿ ಅವರೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮಂಡ್ಯ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಕುರಿತು ಚರ್ಚಿಸಿ, ಉನ್ನತೀಕರಣ ಮಾಡುವ ಸಂಕಲ್ಪ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒತ್ತುವರಿ ಜಾಗದ ಸಂಪೂರ್ಣ ಪಟ್ಟಿ ಸಿದ್ಧವಿದೆ. ಈ ಬಗ್ಗೆ ಗಂಭೀರವಾಗಿ ಚರ್ಚೆ ನಡೆದಿದೆ. ಪ್ರತಿಭಟನಾಕಾರರು ಸಮಾಧಾನದಿಂದ ಪ್ರತಿಭಟನೆಯನ್ನು ಹಿಂಪಡೆದಿದ್ದಾರೆ. ನಾನು ಈ ವಿಚಾರದಲ್ಲಿ ಅತ್ಯಂತ ಗಂಭೀರವಾಗಿದ್ದೇನೆ ಎಂದರು.

ತೆರವು ಕಾರ್ಯಾಚರಣೆ ಖಚಿತವೇ? ಎಂಬ ಪ್ರಶ್ನೆಗೆ, ಈಗ ದಿನಾಂಕವನ್ನು ಹೇಳುವುದಿಲ್ಲ, ಹೇಳದೆ ಮಾಡುವುದು ನನ್ನ ಅಭ್ಯಾಸ. ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಕಾನೂನಾತ್ಮಕ ಅಡೆತಡೆಗಳಿವೆ. ಹೀಗಾಗಿ ನಿರ್ದಿಷ್ಟ ದಿನಾಂಕದಂದು ತೆರವುಗೊಳಿಸುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಕಾರ್ಯಾಚರಣೆಯನ್ನು ಮಾಡಿಯೇ ತೀರುತ್ತೇವೆ ಎಂದು ಭರವಸೆ ನೀಡಿದರು.

ತಡೆಯಾಜ್ಞೆ ತೆರವಾಗಲು ಮೂರು ವರ್ಷ ವಿಳಂಬವಾಗಲು ಕಾರಣವೇನು? ಎಂಬ ಪ್ರಶ್ನೆಗೆ, ವಿಳಂಬವಾಗಿರುವುದು ನಿಜ, ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ. ಕೆಲಸದ ಒತ್ತಡದಿಂದ ಇಂತಹ ವಿಳಂಬವಾಗಿದೆ. ಈಗ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸಿ ಪರಿಸ್ಥಿತಿಯನ್ನು ಸರಿಪಡಿಸಲಾಗುವುದು ಎಂದರು.

**ಕಾವೇರಿ ವಿವಾದಕ್ಕೆ ಮೇಕೆದಾಟು ಶಾಶ್ವತ ಪರಿಹಾರ:** ನೀರಾವರಿ ಕುರಿತು ಮಾತನಾಡಿದ ಸಚಿವರು ಹೇಮಾವತಿ ನೀರು 250 ಕಿ.ಮೀ. ದೂರದಿಂದ ಬರಬೇಕಿದ್ದು, ಚನ್ನಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ ಭಾಗದಲ್ಲಿ ಅಡ್ಡಗಟ್ಟುವುದರಿಂದ ಟೇಲ್ ಎಂಡ್ ಭಾಗಕ್ಕೆ ನೀರು ತಲುಪುತ್ತಿಲ್ಲ. ಪೊಲೀಸ್ ರಕ್ಷಣೆಯೊಂದಿಗೆ ನೀರು ಹರಿಸಲು ಎಂಡಿ ಅವರಿಗೆ ಸೂಚಿಸಲಾಗಿದೆ. ಮದ್ದೂರು, ಮಳವಳ್ಳಿ ಭಾಗದ ಕೆರೆ ತುಂಬಿಸಲೂ ಕ್ರಮ ಕೈಗೊಳ್ಳಲಾಗುವುದು. ಎರಡನೇ ಕಟ್ಟಿನ ನೀರನ್ನು ಸೆ.20 ರಿಂದ ಬಿಡುಗಡೆ ಮಾಡಲಾಗುವುದು. ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರ ಮೇಕೆದಾಟು ಯೋಜನೆಯೇ ಆಗಿದೆ. ಸುಪ್ರೀಂ ಕೋರ್ಟ್ ವಿಚಾರಣೆ ಮುಂದೂಡಿಕೆಯಾಗಿದ್ದು, ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಅಘಖಅ ಮತ್ತು ಅಘಒಂ ಮುಂದೆ ರಿವ್ಯೂ ಅರ್ಜಿ ಸಲ್ಲಿಸಲಾಗುತ್ತಿದೆ ಎಂದರು.

**ಸಾಂಸ್ಕೃತಿಕ ಪರಂಪರೆ ಉಳಿಸುವ ನಿಟ್ಟಿನಲ್ಲಿ ದಸರಾ:** ಮೈಸೂರು ಅರಮನೆ ದಸರಾ ಪ್ರಸಿದ್ಧವಾದರೂ, ಐತಿಹಾಸಿಕವಾಗಿ ಶ್ರೀರಂಗಪಟ್ಟಣದ ದಸರಾವೇ ಅತ್ಯಂತ ಪುರಾತನವಾದುದು. ರಾಜ್ಯದಲ್ಲಿ ಬರಗಾಲ ಇದ್ದರೂ ಸಾಂಸ್ಕೃತಿಕ ಪರಂಪರೆ ಉಳಿಸುವ ನಿಟ್ಟಿನಲ್ಲಿ ದಸರಾ ಆಚರಣೆಗೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಅದರಂತೆ ಮಂಡ್ಯದಲ್ಲೂ ಶಾಸಕ ರವಿಕುಮಾರ್ ಗಣಿಗ (ಬಾಬಣ್ಣ) ಅವರ ನೇತೃತ್ವದಲ್ಲಿ, ಜಿಲ್ಲಾಡಳಿತ ಮತ್ತು ಎಲ್ಲ ಜನಪ್ರತಿನಿಧಿಗಳ ಸಹಕಾರದೊಂದಿಗೆ ದಸರಾವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ್ ಬಾಬು ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ. ಮಾದೇಗೌಡ, ಜಿಲ್ಲಾಧಿಕಾರಿ ಡಾ. ಕುಮಾರ, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

# ಸೆ.17 ರಂದು ವಿಜೃಂಭಣೆಯ ದೇವಶಿಲ್ಪಿ ವಿಶ್ವಕರ್ಮ ಮಹೋತ್ಸವ: ತಿರುಮಲಾಚಾರ್ ಮಾಹಿತಿ




**ಮಂಡ್ಯ:** ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ವಿಶ್ವಕರ್ಮ ಸಮಾಜದ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಸೆಪ್ಟೆಂಬರ್ 17 ರ ಗುರುವಾರದಂದು ದೇವಶಿಲ್ಪಿ ಶ್ರೀ ವಿಶ್ವಕರ್ಮ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ವಿಶ್ವಕರ್ಮ ಸಮಾಜದ ಮುಖಂಡ ತಿರುಮಲಾಚಾರ್ ಅವರು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಸೆಪ್ಟೆಂಬರ್ 17 ರ ಗುರುವಾರ ಬೆಳಿಗ್ಗೆ 11:30 ಗಂಟೆಗೆ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಭಗವಾನ್ ಶ್ರೀ ವಿಶ್ವಕರ್ಮರ ಭವ್ಯ ಮೆರವಣಿಗೆ ಪ್ರಾರಂಭವಾಗಲಿದೆ. ಮೆರವಣಿಗೆಯು ವಿವಿಧ ಕಲಾತಂಡಗಳೊಂದಿಗೆ ಮೈನ್ ರೋಡ್, ವಿ.ವಿ. ರಸ್ತೆ, ಕೆ.ಆರ್. ರಸ್ತೆ ಮುಖಾಂತರ ಸಾಗಿ ಡಾ. ಬಿ.ಆರ್. ಅಂಬೇಡ್ಕರ್ ಭವನ, ತಲುಪಲಿದೆ ಎಂದರು. ಅಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು,ಸರ್ಕಾರಿ ಪದವಿಪೂರ್ವ ಕಾಲೇಜು, ಬಿಳಿಕೆರೆ ಪ್ರಾಂಶುಪಾಲರಾದ ವಿದ್ವಾನ್ ಬಿ.ಎಸ್. ಗಂಗಾಧರ ಆಚಾರ್ ಅವರು ವಿಶ್ವಕರ್ಮ ತತ್ವದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಜೊತೆಗೆ ಪ್ರತಿ ತಾಲೂಕಿನಿಂದ ಒಬ್ಬರಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಅವರು ತಿಳಿಸಿದರು.

ಈ ಮಹೋತ್ಸವಕ್ಕೆ ಕೇಂದ್ರ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲ ಶಾಸಕರು ಹಾಗೂ ಪ್ರಮುಖ ಗಣ್ಯರು ಆಗಮಿಸಲಿದ್ದಾರೆ ಎಂದರು.

**ಸಮುದಾಯ ಭವನದ ಬೇಡಿಕೆ:** ನಾವು ಸಮುದಾಯ ಭವನವನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದೇವೆ. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ (ಒಗಅಂ) ಒಂದು ನಿವೇಶನ ನೀಡಲಾಗಿದ್ದು, ಅದಕ್ಕೆ ನಾವು ಈಗಾಗಲೇ 40 ಲಕ್ಷ ರೂ. ಕಟ್ಟಿದ್ದೇವೆ. ಅದರ ಒಟ್ಟು ಮೌಲ್ಯ ಸುಮಾರು 1 ಕೋಟಿ 32 ಲಕ್ಷ ರೂ. ಗಳಾಗಿದೆ.ಸರ್ಕಾರವು ಸಣ್ಣ ಸಮುದಾಯಗಳಿಗೆ ಪ್ರಾಧಿಕಾರದ ನಿವೇಶನ ನೀಡಿದರೆ 50% ಹಣ ಭರಿಸಿ ನೋಂದಣಿ ಮಾಡಿಸಿಕೊಡಬೇಕು ಎಂಬ ಆದೇಶ ಹೊರಡಿಸಿದೆ. ನಮ್ಮ ನಿವೇಶನಕ್ಕೂ ಈ ಆದೇಶ ಅನ್ವಯಿಸಿ ಅನುಕೂಲ ಮಾಡಿಕೊಡಬೇಕು. ಈ ಕುರಿತು ಈಗಾಗಲೇ ಉಸ್ತುವಾರಿ ಸಚಿವರಿಗೆ, ಶಾಸಕರಿಗೆ ಮನವಿ ಸಲ್ಲಿಸಿದ್ದು ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು. ಆದ್ದರಿಂದ ಮಂಡ್ಯ ಜಿಲ್ಲೆಯ ಎಲ್ಲ ತಾಲೂಕು ಸಂಘಟನೆಗಳ ಪದಾಧಿಕಾರಿಗಳು, ಕುಲಬಾಂಧವರು, ಪಂಚಕಸುಬುದಾರರು ತಮ್ಮ ಕೆಲಸಕ್ಕೆ ರಜೆ ಮಾಡಿ ಕುಟುಂಬ ಸಮೇತ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಶಿಲ್ಪಿಯ ಕೃಪೆಗೆ ಪಾತ್ರರಾಗಬೇಕು ಎಂದು ಅವರು ಕೋರಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷರಾದ ನರಸಿಂಹಾಚಾರ್ (ದೊಡ್ಡ ಸ್ವಾಮಿ),ಕೆ.ಆರ್. ನರಸಿಂಹಾಚಾರ್, ಸಮಾಜದ ನಿರ್ದೇಶಕರಾದ ಸುದರ್ಶನ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಸಾಮಾಜಿಕ ಕಾರ್ಯಕರ್ತರ ಒಕ್ಕೂಟ: ಮಂಡ್ಯ ಜಿಲ್ಲಾ ನೂತನ ಸಮಿತಿ ರಚನೆ

**ಮಂಡ್ಯ:** ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ ನಡೆಸುವುದು ಹಾಗೂ ಅನ್ಯಾಯಕ್ಕೊಳಗಾದ ಜನಸಾಮಾನ್ಯರಿಗೆ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸಾಮಾಜಿಕ ಕಾರ್ಯಕರ್ತರ ಒಕ್ಕೂಟದ ಜಿಲ್ಲಾ ಸಮಿತಿ ರಚಿಸಲಾಗಿದೆ ಎಂದು ರಾಜ್ಯ ಅಧ್ಯಕ್ಷರಾದ ಸ್ವಾಮಿ ಟಿ.ಹೆಚ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸೆ.12 ರಂದು ನಡೆದ ರಾಜ್ಯ ಕಾರ್ಯಕಾರಿ ಸಭೆಯಲ್ಲಿ ಮಂಡ್ಯ ಜಿಲ್ಲಾ ಒಕ್ಕೂಟದ ನೂತನ ಸಮಿತಿಯನ್ನು ಸರ್ವಾನುಮತದಿಂದ ರಚನೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ನೂತನವಾಗಿ ನೇಮಕಗೊಂಡ ಪದಾಧಿಕಾರಿಗಳ ವಿವರ

ಸಂಘಟನೆಯ ಗೌರವಾಧ್ಯಕ್ಷರಾಗಿ ಎಸ್.ಪಿ. ನಾರಾಯಣ ಸ್ವಾಮಿ, ಜಿಲ್ಲಾಧ್ಯಕ್ಷರಾಗಿ ಎನ್. ಚಂದ್ರು ಅವರು ಆಯ್ಕೆಯಾಗಿದ್ದಾರೆ.ಜಿಲ್ಲಾ ಉಪಾಧ್ಯಕ್ಷರುಗಳಾಗಿ ಶಿವಕುಮಾರ್ ಹಾಡ್ಯ, ಕೃಷ್ಣಪ್ರಸಾದ್, ಕೆ.ಟಿ. ಗಂಗಾಧರಯ್ಯ ಮತ್ತು ಬಾಲರಾಜ್ ಸಿ.ಕೆ. ಅವರು ನೇಮಕಗೊಂಡಿದ್ದಾರೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಶಿವಪ್ರಸಾದ್ ಸಿ.ಡಿ, ಜಿಲ್ಲಾ ಜಂಟಿ ಕಾರ್ಯದರ್ಶಿಯಾಗಿ ಅಶೋಕ್ ಗೌಡ, ಕಾರ್ಯದರ್ಶಿಗಳಾಗಿ ಕುಮಾರ್ ಎಂ.ಪಿ. ಮತ್ತು ಜಯೇಂದ್ರ ಎಸ್.ಡಿ ಹಾಗೂ ಸಹ ಕಾರ್ಯದರ್ಶಿಯಾಗಿ ರಮಾನಂದ ಎನ್ ಅವರು ಕಾರ್ಯನಿರ್ವಹಿಸಲಿದ್ದಾರೆ.

ಜಿಲ್ಲಾ ಖಜಾಂಚಿಯಾಗಿ ರಮೇಶ್, ಮಾಧ್ಯಮ




ಮತ್ತು ಪ್ರಚಾರ ಸಮಿತಿಯಾಗಿ ಸಂತೋಷ್ ಟಿ.ಬಿ, ಜಿಲ್ಲಾ ಸಂಚಾಲಕರಾಗಿ ಶಿವಕುಮಾರ್ ಹೆಚ್.ಬಿ, ಸಹ ಸಂಚಾಲಕರಾಗಿ ಪೃಥ್ವಿ ಸಿ.ಎಸ್, ಕಾರ್ಯಕಾರಿಣಿ ಸದಸ್ಯರಾಗಿ ರಾಜಗೋಪಾಲ್ ಮತ್ತು ಮಾರ್ಗದರ್ಶಕರಾಗಿ ಎಸ್. ನಾಗರಾಜು ಅವರನ್ನು ನೇಮಿಸಲಾಗಿದೆ.ಮಹಿಳಾ ಘಟಕದ ಜಿಲ್ಲಾ ಮಹಿಳಾ ಜಂಟಿ ಕಾರ್ಯದರ್ಶಿಯಾಗಿ ಪಲ್ಲವಿ, ಜಿಲ್ಲಾ ಮಹಿಳಾ ಕಾರ್ಯದರ್ಶಿಯಾಗಿ ಗೀತಾ ಎಮ್.ಎಚ್ ಹಾಗೂ ಮಹಿಳಾ ಸಹ ಕಾರ್ಯದರ್ಶಿಗಳಾಗಿ ಜಯ ಸುಧಾ ಮತ್ತು ಸುಮಾ ಎಸ್ ಅವರು ನೇಮಕಗೊಂಡಿದ್ದಾರೆ.

ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಗೌರವಾಧ್ಯಕ್ಷರಾದ ಎಸ್.ಪಿ. ನಾರಾಯಣಸ್ವಾಮಿ, ಜಿಲ್ಲಾಧ್ಯಕ್ಷರಾದ ಎನ್.ಚಂದ್ರು, ಉಪಾಧ್ಯಕ್ಷರಾದ ಶಿವಕುಮಾರ್ ಹಾಡ್ಯ, ಉಪಾಧ್ಯಕ್ಷರಾದ ಕೆ.ಟಿ.ಗಂಗಾಧರಯ್ಯ, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ಸೇರಿದಂತೆ ನೂತನ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸರ್ಕಾರಿ ಶಾಲಾ ಗ್ರಂಥಾಲಯಕ್ಕೆ 'ಕರ್ನಾಟಕ ಕ್ರೀಡಾ ಸಾಧಕರು' ಪುಸ್ತಕ ಕೊಡುಗೆ

**ಹೊನ್ನಾಳಿ:** ಪಟ್ಟಣದ ಪೇಟೆ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯ ಗ್ರಂಥಾಲಯಕ್ಕೆ ಖ್ಯಾತ ಲೇಖಕ ಡಾ. ಸುಧಾಕರ ಜಿ. ಲಕ್ಕವಳ್ಳಿ ಅವರು ತಾವು ರಚಿಸಿ ಪ್ರಕಟಿಸಿರುವ ಕರ್ನಾಟಕ ಕ್ರೀಡಾ ಸಾಧಕರು ಪುಸ್ತಕವನ್ನು ಉಚಿತವಾಗಿ ಕೊಡುಗೆಯಾಗಿ ನೀಡಿದರು.

ಶಾಲೆಯಲ್ಲಿ ನಡೆದ ಪುಸ್ತಕ ಸ್ವೀಕಾರ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ದೈಹಿಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪುಸ್ತಕಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯ ಶಿಕ್ಷಕರು, "ಇಂದಿನ ದಿನಗಳಲ್ಲಿ ಸಾಹಿತಿಗಳಿಗೆ ಇಂತಹ ಹೃದಯ ವೈಶಾಲ್ಯತೆ ಅತ್ಯಗತ್ಯ. ತಾವೇ ಶ್ರಮಪಟ್ಟು ಬರೆದು ಪ್ರಕಟಿಸಿದ ಪುಸ್ತಕಗಳನ್ನು ಸರ್ಕಾರಿ ಶಾಲಾ ಮಕ್ಕಳ ಜ್ಞಾನ ವೃದ್ಧಿಗಾಗಿ ಉಚಿತವಾಗಿ ನೀಡುತ್ತಿರುವ ಡಾ. ಸುಧಾಕರ ಜಿ. ಲಕ್ಕವಳ್ಳಿ ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ. ಈ ಪುಸ್ತಕವು ಮಕ್ಕಳಲ್ಲಿ ಕ್ರೀಡಾ ಸ್ಫೂರ್ತಿ ಮತ್ತು ಸಾಧನೆ ಮಾಡಬೇಕೆಂಬ ಛಲವನ್ನು ಮೂಡಿಸುತ್ತದೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕದ ಹೆಮ್ಮೆಯ ಕ್ರೀಡಾ ಸಾಧಕರ



ಜೀವನ, ಸಾಧನೆಗಳನ್ನು ಒಳಗೊಂಡ ಈ ಪುಸ್ತಕವು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾಗಿದೆ. ಡಾ. ಸುಧಾಕರ ಅವರ ಈ ಸಮಾಜಮುಖಿ ಕಾರ್ಯಕ್ಕೆ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಜಗತ್ತು ಕಂಡ ಶ್ರೇಷ್ಠ ಯಂತ್ರರ್ಷಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ರವರ ಜನ್ಮದಿನಾಚರಣೆ

# ಕಾವೇರಿವನದಲ್ಲಿ ವಿವಿಧ ಸಂಘಟನೆಗಳಿಂದ ಗೌರವ ನಮನ

**ಮಂಡ್ಯ:** ಭಾರತ ಕಂಡ ಶ್ರೇಷ್ಠ ಇಂಜಿನಿಯರ್, ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ರವರ 165ನೇ ಜನ್ಮದಿನಾಚರಣೆ ಪ್ರಯುಕ್ತ ಮಂಡ್ಯ ನಗರದ ಕಾವೇರಿ ವನ ಮತ್ತು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಅವರ ಪ್ರತಿಮೆಗೆ ವಿವಿಧ ಸಂಘಟನೆಗಳ ವತಿಯಿಂದ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು.

ಕೃಷಿಕ ಅಲಯನ್ಸ್ ಮತ್ತು ಮಾಂಡವ್ಯ ಸಂಸ್ಥೆ ವತಿಯಿಂದ ನಿವೃತ್ತ ಇಂಜಿನಿಯರ್‌ಗೆ ಸನ್ಮಾನ

ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರು ಜಗತ್ತು ಕಂಡ ಶ್ರೇಷ್ಠ ಇಂಜಿನಿಯರ್ ಎಂದು ಕೃಷಿಕ ಅಲಯನ್ಸ್ ಸಂಸ್ಥೆಯ ಕೆ.ಟಿ. ಹನುಮಂತು ಬಣ್ಣಿಸಿದರು.

ಅಭಿಯಂತರರ ದಿನಾಚರಣೆ ಅಂಗವಾಗಿ ಮಂಡ್ಯದ ಕಾವೇರಿವನದ ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ಮಾಂಡವ್ಯ ಹಾಗೂ ಕೃಷಿಕ ಅಲಯನ್ಸ್ ಸಂಸ್ಥೆ ವತಿಯಿಂದ ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಲಿಂಗೇಗೌಡ ರವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಸರ್ ಎಂ ವಿಶ್ವೇಶ್ವರಯ್ಯ ಅವರ ಜನ್ಮದಿನವನ್ನು ಭಾರತ ದೇಶದಲ್ಲಿ ಇಂಜಿನಿಯರ್ ದಿನವಾಗಿ ಇಂಡಿಯಾ ಸೇರಿದಂತೆ ಜಗತ್ತಿನ ಹಲವು ದೇಶಗಳಲ್ಲಿ ವಿಶ್ವೇಶ್ವರಯ್ಯ ಅವರ ಜನ್ಮದಿನ



ಆಚರಣೆ ಮಾಡಲಾಗುತ್ತಿದೆ.

ವಿಶ್ವೇಶ್ವರಯ್ಯ ಅವರು 102 ವರ್ಷಗಳ ಕಾಲ ತುಂಬು ಜೀವನ ನಡೆಸಿದವರು. ನೀರಾವರಿ, ಕೈಗಾರಿಕೆ, ಆರ್ಥಿಕ, ಆಡಳಿತ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ತನ್ನದೇ ಆದ ಛಾಪು ಮೂಡಿಸಿ ಸಾಧನೆ ಮಾಡಿದ್ದಾರೆ.ಇದಕ್ಕಾಗಿ ಭಾರತ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಪ್ರಥಮ ಭಾರತರತ್ನ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಬ್ರಿಟಿಷರಿಂದ 'ಸರ್' ಎಂಬ ಪದವಿ ಬಂದಿದೆ. ಯುವ ಇಂಜಿನಿಯರ್‌ಗಳು ಸರ್ ಎಂ ವಿಶ್ವೇಶ್ವರಯ್ಯ ಅವರನ್ನು ಮಾದರಿ ಯಾಗಿಟ್ಟುಕೊಂಡು ಕೆಲಸ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಇಂಜಿನಿಯರಿಂಗ್ ಕ್ಷೇತ್ರ ಕಲುಷಿತವಾಗುತ್ತಿದೆ. ವಿಶ್ವೇಶ್ವರಯ್ಯ ಅವರು ಸ್ವಜನ ಪಕ್ಷಪಾತ, ಭ್ರಷ್ಟಾಚಾರವನ್ನು ಕಿಂಚಿತ್ತೂ ಮಾಡುತ್ತಿರಲಿಲ್ಲ. ರಾಜಕಾರಣಿಗಳು, ಅಧಿಕಾರಿಗಳು, ಇಂಜಿನಿಯರ್‌ಗಳು ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಒಂದನೇ ಜಿಲ್ಲಾ ರಾಜ್ಯಪಾಲ ಅಲೈ ಚಂದ್ರಶೇಖರ, ಮಾಂಡವ್ಯ ಅಲಯನ್ಸ್ ಕ್ಲಬ್ ಅಧ್ಯಕ್ಷ ಹಾಗೂ ಪ್ರಾಂತೀಯ ಅಧ್ಯಕ್ಷ ಅಲೈ ಬಿ.ಎಸ್. ಶಿವಕುಮಾರ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಅಲೈ ಜಿ. ಧನಂಜಯ ದರಸಗುಪ್ಪೆ, ಸೇವಾ ಕಿರಣ ಚಾರಿಟಬಲ್ ಟ್ರಸ್ಟ್ ಜಿ.ವಿ. ನಾಗರಾಜು, ವಲಯಾಧ್ಯಕ್ಷ ಈ.ಸಿ. ಹೊಂಬೇಗೌಡ, ವಿ.ಟಿ. ವೆಂಕಟೇಶಯ್ಯ ವಿಶ್ವನಾಥ್, ವಿಠಲ್ ಹಾಗೂ ಇತರರು ಉಪಸ್ಥಿತರಿದ್ದರು.

# ಅಭಿನಯವೇ ಅನಂತ 'ನಾಗ್' ಸಂದ ಗೌರವ: ಕನ್ನಡಕ್ಕೆ ಗರಿ



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com



ಕೆಲವು ಪ್ರಶಸ್ತಿಗಳು ವ್ಯಕ್ತಿಯನ್ನು ಗೌರವಿಸುತ್ತವೆ. ಇನ್ನೂ ಕೆಲವು ಪ್ರಶಸ್ತಿಗಳು ಒಂದು ಕಾಲಘಟ್ಟವನ್ನೇ ಗೌರವಿಸುತ್ತವೆ. ಅನಂತ್ ನಾಗ್ ಅವರಿಗೆ 2024ನೇ ಸಾಲಿನ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಣೆಯಾಗಿರುವುದು ಅಂತಹ ಒಂದು ವಿಶೇಷ ಸಂದರ್ಭ. ಭಾರತೀಯ ಚಿತ್ರರಂಗಕ್ಕೆ ಐದು ದಶಕಗಳಿಗೂ ಮೀರಿದ ಅವರ ಕೊಡುಗೆಯನ್ನು ಗುರುತಿಸಿ ಈ ಗೌರವ ನೀಡಲಾಗುತ್ತಿದೆ.

ಐದು ದಶಕಗಳಿಗೂ ಮೀರಿದ ಅನಂತ್ ನಾಗ್ ಅವರ ಕಲಾಯಾತ್ರೆಯನ್ನು ನೆನಪಿಸಿಕೊಂಡಾಗ, ನಮ್ಮ ಕಣ್ಣ ಮುಂದೆ ಕೇವಲ ಒಬ್ಬ ನಟನ ಚಿತ್ರ ಮೂಡುವುದಿಲ್ಲ. ಬದಲಾಗಿ, ಕನ್ನಡ ಚಿತ್ರರಂಗದ ಹಲವು ದಶಕಗಳ ಪಯಣವೇ ತೆರೆದುಕೊಳ್ಳುತ್ತದೆ. ಕಲಾತ್ಮಕ ಚಿತ್ರಗಳಿಂದ ಜನಪ್ರಿಯ ಸಿನಿಮಾಗಳವರೆಗೆ, ನಾಯಕನ ಪಾತ್ರಗಳಿಂದ ಪೋಷಕ ಪಾತ್ರಗಳವರೆಗೆ, ಬೆಳ್ಳಿತೆರೆಯಿಂದ ಕಿರುತೆರೆಯವರೆಗೆ?ಅವರ ಅಭಿನಯದ ವ್ಯಾಪ್ತಿ ವಿಶಾಲವಾಗಿದೆ.

**ನಟ ಎನ್ನುವುದಕ್ಕೆ ಒಂದು ಸರಳ ಅರ್ಥ :** ಅನಂತ್ ನಾಗ್ ಅವರ ಅಭಿನಯವನ್ನು ನೆನಪಿಸಿಕೊಳ್ಳುವಾಗ ಮೊದಲು ನೆನಪಾಗುವುದು ಅವರ ಸಹಜತೆ. ಅವರು ಪಾತ್ರವನ್ನು ಅಭಿನಯಿಸುತ್ತಿದ್ದಾರೆ ಎನ್ನುವುದಕ್ಕಿಂತ, ಆ ಪಾತ್ರವೇ ಅವರೊಳಗೆ ಬದುಕುತ್ತಿದೆ ಎಂಬ ಭಾವ ಮೂಡಿಸುತ್ತದೆ. ಸಂಭಾಷಣೆ ಹೇಳುವಾಗಲೂ, ಮೌನವಾಗಿರುವಾಗಲೂ, ಕೋಪ ವ್ಯಕ್ತಪಡಿಸುವಾಗಲೂ, ನೋವನ್ನು ಮರೆಮಾಚುವಾಗಲೂ ಅವರ ಅಭಿನಯದಲ್ಲಿ ಸಹಜವಾದ ಮಾನವೀಯತೆ ಕಾಣಿಸುತ್ತದೆ. ಇದು ಸುಲಭವಾದ ಸಾಧನೆಯಲ್ಲ.

ಅಭಿನಯದಲ್ಲಿ ದೊಡ್ಡ ಹಾವಭಾವಗಳಿಗಿಂತ ಕಣ್ಣಿನ ಸಣ್ಣ ಚಲನೆ, ಧ್ವನಿಯ ಏರಿಳಿತ ಮತ್ತು ಮಾತಿನ ನಡುವಿನ ವಿರಾಮ?ಇವೆಲ್ಲವೂ ಮುಖ್ಯವಾಗುತ್ತವೆ. ಈ ಸೂಕ್ಷ್ಮತೆಯನ್ನು ತಮ್ಮ ಅಭಿನಯದ ಶಕ್ತಿಯನ್ನಾಗಿ ಮಾಡಿಕೊಂಡ ಕಲಾವಿದ ಅನಂತ್ ನಾಗ್.

ಕಲಾತ್ಮಕತೆ ಮತ್ತು ಜನಪ್ರಿಯತೆ?ಎರಡರ ನಡುವಿನ ಸೇತುವೆ : ಶ್ಯಾಮ್ ಬೆನಗಲ್ ನಿರ್ದೇಶನದ ಅಂಕುರ್, ನಿಶಾಂತ್, ಮಂಥನ್ ಮತ್ತು ಕೊಂಡುರಾ ಚಿತ್ರಗಳಲ್ಲಿ ಅನಂತ್ ನಾಗ್ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಕೊಂಡುರಾ ಶ್ಯಾಮ್ ಬೆನಗಲ್ ಅವರ ಹಿಂದಿ?ತೆಲುಗು ದ್ವಿಭಾಷಾ ಚಿತ್ರವಾಗಿದ್ದು, ಅದರ ತೆಲುಗು ಆವೃತ್ತಿಗೆ ಅನುಗ್ರಹಂ ಎಂಬ ಹೆಸರಿತ್ತು. ಈ ಚಿತ್ರಗಳ ಮೂಲಕ ಅವರು ಸಮಾನಾಂತರ ಅಥವಾ ಕಲಾತ್ಮಕ ಚಿತ್ರರಂಗದಲ್ಲಿಯೂ ತಮ್ಮದೇ ಸ್ಥಾನವನ್ನು ನಿರ್ಮಿಸಿಕೊಂಡರು.

ಜಿ.ವಿ. ಅಯ್ಯರ್ ನಿರ್ದೇಶನದ ಹಂಸಗೀತೆಯಲ್ಲಿ ಅವರು ಸಂಗೀತಗಾರ ಭೈರವಿ ವೆಂಕಟಸುಬ್ಬಯ್ಯನ ಪಾತ್ರವನ್ನು ನಿರ್ವಹಿಸಿದರು. ಮತ್ತೊಂದೆಡೆ, ಬಯಲು ದಾರಿ, ಚಂದನದ ಗೊಂಬೆ ಮತ್ತು ನಾ ನಿನ್ನ ಬಿಡಲಾರೆ ಮೊದಲಾದ ಕನ್ನಡ ಚಿತ್ರಗಳು ಅವರನ್ನು ಜನಪ್ರಿಯ ನಾಯಕನಾಗಿ ಸ್ಥಾಪಿಸಿದವು. ಇಲ್ಲಿಯೇ ಅನಂತ್ ನಾಗ್ ಅವರ ವೈಶಿಷ್ಟ್ಯ ಕಾಣಿಸುತ್ತದೆ.

ಕಲಾತ್ಮಕ ಸಿನಿಮಾಗಳ ಪ್ರೇಕ್ಷಕರಿಗೂ ಅವರು ತಮ್ಮವರಾಗಿದ್ದರು. ಜನಪ್ರಿಯ ಸಿನಿಮಾಗಳ ಪ್ರೇಕ್ಷಕರಿಗೂ ಅವರು ತಮ್ಮವರಾಗಿದ್ದರು. ಮುಂದೆ ಹಾಸ್ಯ ಪ್ರಧಾನ ಪಾತ್ರಗಳಲ್ಲಿಯೂ ತಮ್ಮದೇ ಛಾಪು ಮೂಡಿಸಿದರು. ನಾರದ ವಿಜಯ, ಗೋಲ್ಮಾಲ್ ರಾಧಾಕೃಷ್ಣ, ಗಣೇಶನ ಮದುವೆ ಮತ್ತು ಗೌರಿ ಗಣೇಶ ಮೊದಲಾದ ಚಿತ್ರಗಳು ಅವರ ಹಾಸ್ಯಪ್ರಜ್ಞೆ ಮತ್ತು ವಿಭಿನ್ನ ಅಭಿನಯ ಸಾಮರ್ಥ್ಯವನ್ನು ತೋರಿಸಿದವು.

ಬೆಳದಿಂಗಳ ಬಾಲೆ?ಯ ರೇವಂತ್

ಅನಂತ್ ನಾಗ್ ಅವರ ಸೂಕ್ಷ್ಮ ಅಭಿನಯಕ್ಕೆ ಬೆಳದಿಂಗಳ ಬಾಲೆ ಒಂದು ಉತ್ತಮ ಉದಾಹರಣೆ. ಚಿತ್ರದಲ್ಲಿ ಅವರು ಚೆಸ್ ಗ್ರ್ಯಾಂಡ್‌ಮಾಸ್ಟರ್ ರೇವಂತ್ ಪಾತ್ರವನ್ನು ನಿರ್ವಹಿಸಿದ್ದಾರೆ. ಒಗಟುಗಳ ಮೂಲಕ ಅವರ ಬುದ್ಧಿಶಕ್ತಿಗೆ ಸವಾಲು ಹಾಕುವ ಅಪರಿಚಿತ ಮಹಿಳೆಯ ದೂರವಾಣಿ ಕರೆಗಳಿಂದ ಅವರ ವ್ಯವಸ್ಥಿತ ಜೀವನವೇ ಬದಲಾಗುತ್ತದೆ. ಅವಳ ಜಾಣ್ಮೆಗೆ ಮರುಳಾಗುವ ರೇವಂತ್, ಅವಳನ್ನು ಪತ್ತೆಹಚ್ಚಲು ತನ್ನ ತಾರ್ಕಿಕ ಮನಸ್ಸನ್ನು ಬಳಸುತ್ತಾ ಅವಳ ಬೆನ್ನತ್ತುತ್ತಾರೆ.

ದೂರವಾಣಿ ಸಂಭಾಷಣೆಗಳ ಸಂದರ್ಭದಲ್ಲಿನ ಸೂಕ್ಷ್ಮ ಮುಖಭಾವಗಳ ಮೂಲಕವೇ ಅನಂತ್ ನಾಗ್ ಅವರು ಗಂಭೀರ, ಪ್ರತಿಭಾವಂತ ವ್ಯಕ್ತಿಯೊಬ್ಬ ಪ್ರೀತಿಯಲ್ಲಿ ಬಿದ್ದಾಗ ಆಗುವ ಭಾವನಾತ್ಮಕ ಬದಲಾವಣೆಯನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಅಲ್ಲಿ ದೊಡ್ಡ ಸಂಭಾಷಣೆಗಳಿಲ್ಲ. ದೊಡ್ಡ ಹಾವಭಾವಗಳಿಲ್ಲ. ಆದರೆ ಮುಖದ ಮೇಲೆ ಮೂಡುವ ಸಣ್ಣ ಬದಲಾವಣೆಗಳೇ ಪಾತ್ರದ ಒಳಜಗತ್ತನ್ನು ಪ್ರೇಕ್ಷಕರಿಗೆ ತಲುಪಿಸುತ್ತವೆ. ಅದೇ ಅನಂತ್ ನಾಗ್ ಅವರ ಅಭಿನಯದ ಶಕ್ತಿ.

**ಸಹೋದರರ ಸೃಜನಶೀಲ ಬಂಧ**

ಅನಂತ್ ನಾಗ್ ಅವರ ಕಲಾಯಾತ್ರೆಯನ್ನು ಶಂಕರ್ ನಾಗ್ ಅವರ ಹೆಸರಿಲ್ಲದೆ ಹೇಳುವುದು ಅಪೂರ್ಣ. ಇಬ್ಬರು ಸಹೋದರರು ಒಂದೇ ಕ್ಷೇತ್ರದಲ್ಲಿ ತಮ್ಮದೇ ಆದ ದಾರಿಯನ್ನು ರೂಪಿಸಿಕೊಂಡರು. ಮಿಂಚಿನ ಓಟ, ಜನ್ಮ ಜನ್ಮದ ಅನುಬಂಧ, ನೋಡಿ ಸ್ವಾಮಿ ನಾವಿರೋದು ಹೀಗೆ ಮತ್ತು ಆಕ್ಸಿಡೆಂಟ್ ಮೊದಲಾದ ಚಿತ್ರಗಳಲ್ಲಿ ಅವರ ಸಹಯೋಗ ಕನ್ನಡ ಚಿತ್ರರಂಗದ ಒಂದು ವಿಶಿಷ್ಟ ಅಧ್ಯಾಯವಾಗಿದೆ.

ಈ ಚಿತ್ರಗಳಲ್ಲಿ ಅವರ ಪಾತ್ರಗಳು ಮತ್ತು ಸಹಯೋಗದ ಸ್ವರೂಪ ಚಿತ್ರದಿಂದ ಚಿತ್ರಕ್ಕೆ ಬದಲಾಗುತ್ತದೆ. ಆದ್ದರಿಂದ, ಅವುಗಳನ್ನು ಒಂದೇ ರೀತಿಯ ಸಹೋದರರ ಜೋಡಿ ಚಿತ್ರಗಳೆಂದು ಹೇಳುವುದಕ್ಕಿಂತ, ಇಬ್ಬರು ಕಲಾವಿದರ ವಿಭಿನ್ನ ಸೃಜನಶೀಲ ಸಹಭಾಗಿತ್ವವೆಂದು ಹೇಳುವುದು ಹೆಚ್ಚು ನಿಖರ.

ಮಾಲ್ಗುಡಿ ಡೇಸ್ ಈ ಬಂಧಕ್ಕೆ ಮತ್ತೊಂದು ಅರ್ಥ ನೀಡಿತು. ಆರ್.ಕೆ. ನಾರಾಯಣರ ಕೃತಿಯನ್ನು ಆಧರಿಸಿದ ಈ ಪ್ರಸಿದ್ಧ ದೂರದರ್ಶನ ಸರಣಿಯನ್ನು ಶಂಕರ್ ನಾಗ್ ನಿರ್ದೇಶಿಸಿದರು. ಅನಂತ್ ನಾಗ್ ಅವರು ಸರಣಿಯಲ್ಲಿ ಹಲವು ಗಮನಾರ್ಹ ಪಾತ್ರಗಳನ್ನು ನಿರ್ವಹಿಸಿದರು. ವಿಶೇಷವಾಗಿ ದಿ ವೆಂಡರ್ ಆಫ್ ಸ್ವೀಟ್ಸ್‌ನಲ್ಲಿ ಗಾಂಧಿವಾದಿ ಸಿಹಿ ವ್ಯಾಪಾರಿ ಜಗನ್ ಆಗಿ ಮತ್ತು ಟಾಕಟೀವ್ ಮ್ಯಾನ್‌ನ ಶೇಷಾದ್ರಿಯಾಗಿ ಅವರ ಅಭಿನಯ ಪ್ರೇಕ್ಷಕರ ನೆನಪಿನಲ್ಲಿ ಉಳಿದಿದೆ.

ಒಂದೇ ಸರಣಿಯಲ್ಲಿ ಇಂತಹ ವಿಭಿನ್ನ ವ್ಯಕ್ತಿತ್ವಗಳನ್ನು ಸಹಜವಾಗಿ ಕಟ್ಟಿಕೊಟ್ಟದ್ದು ಅವರ ನಟನಾ ವ್ಯಾಪ್ತಿಗೆ ಮತ್ತೊಂದು ಸಾಕ್ಷಿ.

**ಕಾಲ ಬದಲಾದರೂ ನಟ ಬದಲಾಗಲಿಲ್ಲ :** ಅನಂತ್ ನಾಗ್ ಅವರ ಮತ್ತೊಂದು ವಿಶೇಷತೆ ಅವರ ದೀರ್ಘಕಾಲದ ನಿರಂತರತೆ. ಯೌವನದ ನಾಯಕನ ಪಾತ್ರಗಳಿಂದ ಆರಂಭಿಸಿ, ಮಧ್ಯವಯಸ್ಸಿನ ಪಾತ್ರಗಳು, ತಂದೆ, ಹಿರಿಯ ವ್ಯಕ್ತಿ ಮತ್ತು ಅಧಿಕಾರಿಯ ಪಾತ್ರಗಳವರೆಗೆ?ಕಾಲದೊಂದಿಗೆ ಅವರ ಪಾತ್ರಗಳೂ ಬದಲಾಗಿವೆ. ಆದರೆ ನಟನಾಗಿ ಅವರ ಮೂಲ ಗುಣ ಬದಲಾಗಿಲ್ಲ. ಇದೇ ಬಹುಶಃ ದೀರ್ಘಕಾಲದ ಕಲಾಜೀವನದ ನಿಜವಾದ ಪರೀಕ್ಷೆ.

ಒಂದು ಕಾಲದಲ್ಲಿ ಜನಪ್ರಿಯರಾಗುವುದು ಒಂದು ಸಾಧನೆ. ಹಲವು ದಶಕಗಳ ನಂತರವೂ ಪ್ರೇಕ್ಷಕರಿಗೆ ಪರಿಚಿತರಾಗಿ, ಗೌರವಕ್ಕೆ ಪಾತ್ರರಾಗಿ ಉಳಿಯುವುದು ಮತ್ತೊಂದು ಸಾಧನೆ. ಅನಂತ್ ನಾಗ್ ಈ ಎರಡೂ ಹಂತಗಳನ್ನು ದಾಟಿ ಬಂದಿದ್ದಾರೆ.

ಅವರ ಪ್ರಶಸ್ತಿಗಳ ಪಟ್ಟಿಯೂ ಅವರ ಪಯಣದ ವ್ಯಾಪ್ತಿಯನ್ನು ಹೇಳುತ್ತದೆ. ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅವರು ನಾಲ್ಕು ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ರಾಜ್ಯ ಸರ್ಕಾರದ ಡಾ. ವಿಷ್ಣುವರ್ಧನ್ ಪ್ರಶಸ್ತಿಯ ಮೂಲಕ ಜೀವಮಾನ ಸಾಧನೆಗೂ ಗೌರವಿಸಲ್ಪಟ್ಟಿದ್ದಾರೆ. ಫಿಲ್ಮ್‌ಫೇರ್ ಪ್ರಶಸ್ತಿಗಳ ದಕ್ಷಿಣ ವಿಭಾಗದಲ್ಲಿ ಅತ್ಯುತ್ತಮ ನಟನಾಗಿ ಏಳು ಬಾರಿ ಗೌರವಿಸಲ್ಪಟ್ಟಿದ್ದಾರೆ. 2025ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿಯೂ ದೊರೆತಿದೆ.

ಆದರೆ ಅನಂತ್ ನಾಗ್ ಅವರ ಸಾಧನೆಯನ್ನು ಕೇವಲ ಪ್ರಶಸ್ತಿಗಳ ಸಂಖ್ಯೆಯಲ್ಲಿ ಅಳೆಯಲು ಸಾಧ್ಯವಿಲ್ಲ.

ಒಂದು ಪೀಳಿಗೆ ಅವರನ್ನು ನಾಯಕನಾಗಿ ಕಂಡಿದೆ.

ಮತ್ತೊಂದು ಪೀಳಿಗೆ ಅವರನ್ನು ಮಾಲ್ಗುಡಿ ಡೇಸ್‌ನ ಜಗನ್ ಮತ್ತು ಟಾಕಟೀವ್ ಮ್ಯಾನ್ ಆಗಿ ನೆನಪಿಸಿಕೊಂಡಿದೆ. ಇಂದಿನ ಪೀಳಿಗೆ ಅವರನ್ನು ವಿಭಿನ್ನ ಪೋಷಕ ಮತ್ತು ಹಿರಿಯ ಪಾತ್ರಗಳಲ್ಲಿ ನೋಡುತ್ತಿದೆ. ಅದೇ ದೀರ್ಘಕಾಲದ ಕಲಾವಿದನ ನಿಜವಾದ ಪಯಣ. ಪಾತ್ರಗಳು ಬದಲಾಗುತ್ತವೆ. ಕಾಲ ಬದಲಾಗುತ್ತದೆ. ಪ್ರೇಕ್ಷಕರು ಬದಲಾಗುತ್ತಾರೆ. ಆದರೆ ಕಲಾವಿದನ ಮೇಲಿನ ಗೌರವ ಮಾತ್ರ ಉಳಿಯುತ್ತದೆ.

**ಕನ್ನಡದ ಹೆಮ್ಮೆಯ ಕ್ಷಣ:** ಅನಂತ್ ನಾಗ್ ಅವರ ದೀರ್ಘ ಕಲಾಯಾತ್ರೆ ಕನ್ನಡ ಚಿತ್ರರಂಗದ ಹೆಮ್ಮೆಯ ಅಧ್ಯಾಯವಾಗಿದೆ. ಅವರ ಮೂಲಕ ಕನ್ನಡದ ಅಭಿನಯ ಪರಂಪರೆ ಹಲವು ಭಾಷೆಗಳ ಪ್ರೇಕ್ಷಕರಿಗೂ ಪರಿಚಿತವಾಗಿದೆ.

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಅನಂತ್ ನಾಗ್ ಅವರ ವೈಯಕ್ತಿಕ ಸಾಧನೆಯಷ್ಟೇ ಅಲ್ಲ, ಕನ್ನಡ ಚಿತ್ರರಂಗಕ್ಕೂ ಮಹತ್ವದ ಗೌರವ.

ಅನಂತ್ ನಾಗ್ ಅವರಿಗೆ ಪ್ರಶಸ್ತಿ ಸಿಕ್ಕಿರುವುದು ಅವರ ಕಲಾಯಾತ್ರೆಗೆ ಸಿಕ್ಕಿರುವ ರಾಷ್ಟ್ರೀಯ ಗೌರವ.

ಅನಂತ್ ನಾಗ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಕನ್ನಡದ ಪರದೆಯ ಈ ದೀರ್ಘ ಪಯಣಕ್ಕೆ ಕನ್ನಡಿಗರ ಹೃದಯಪೂರ್ವಕ ಗೌರವ.



**ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಭಾರತೀಯ ಚಿತ್ರರಂಗದ ಜೀವಮಾನ ಸಾಧನೆಗೆ ನೀಡಲಾಗುವ ಅತ್ಯುನ್ನತ ರಾಷ್ಟ್ರೀಯ ಚಲನಚಿತ್ರ ಗೌರವಗಳಲ್ಲಿ ಒಂದಾಗಿದೆ. ಭಾರತೀಯ ಚಿತ್ರರಂಗಕ್ಕೆ ನೀಡಿದ ದೀರ್ಘಕಾಲದ ಹಾಗೂ ವಿಶಿಷ್ಟ ಕೊಡುಗೆಯನ್ನು ಗುರುತಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.**
**ಅನಂತ್ ನಾಗ್ ಅವರಿಗೆ 2024ನೇ ಸಾಲಿನ ಈ ಪ್ರಶಸ್ತಿ ಘೋಷಣೆಯಾಗಿರುವುದು, ಅವರ ಐದು ದಶಕಗಳ ಕಲಾಯಾತ್ರೆಗೆ ರಾಷ್ಟ್ರೀಯ ಮನ್ನಣೆ ದೊರೆತಿರುವುದರ ಸಂಕೇತ. ಪ್ರಶಸ್ತಿ ಸೆಪ್ಟೆಂಬರ್ 22ರಂದು ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರದಾನವಾಗಲಿದೆ ಎಂದು ವರದಿಯಾಗಿದೆ.**



## ಅನಂತ್ ನಾಗ್ ಚಿತ್ರ ರಂಗಕ್ಕೆ ಪರಿಚಯಿಸಿದ್ದು ಪ್ರೋ ನಂಜರಾಜ್ ಅರಸ್





**ಮೈಸೂರು ಪ್ರತಿಷ್ಠಿತ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಅನಂತನಾಗ್ ಅವರನ್ನು ಸಿನಿಮಕ್ಕೆ ಪರಿಚಯಿಸಿದ್ದು ಪ್ರೊ.ಪಿ.ವಿ.ನಂಜರಾಜ ಅರಸು. 1973 ರಲ್ಲಿ ಬಿಡುಗಡೆಯಾದ "ಸಂಕಲ್ಪ' ಏಳು ರಾಜ್ಯಪ್ರಶಸ್ತಿ ಗಳಿಸಿತ್ತು. ಇದನ್ನು ನಿರ್ಮಿಸಿ ನಿರ್ದೇಶಿಸಿದ್ದು ನಂಜರಾಜ ಅರಸು. ಮಂಥನ್ ರೀತಿಯ ಹೊಸ ಅಲೆಯ ಚಿತ್ರಗಳಲ್ಲಿ ಹೆಸರಾದ ಅನಂತನಾಗ್ 40 ವರ್ಷಗಳ ಕಲಾ ಜೀವನದಲ್ಲಿ ಫಾಲ್ಕೆಗೆ ಭಾಜನರಾಗಿದ್ದಾರೆ.**

# ಜನರೇಷನ್ ಗ್ಯಾಪ್





| ವೀಣಾ ಪ್ರಭಾಕರ್ ಕಡೆಕಾರ್

ಆಧುನಿಕತೆ ಬೆಳೆದಂತೆ ತಂತ್ರಜ್ಞಾನದ ವಿಕಾಸ ಎಲ್ಲೆ ಮೀರಿದಾಗ ಬದುಕುವ ಬಂಡಿಯ ಹೊರೆ ಭಾರವಾದಾಗ ಸಮಯದ ಹರಿವು ಸೋರಿಹೋಗುವಾಗ, ಆಸೆಗಳ ರೆಕ್ಕೆ ಗರಿಬಿಚ್ಚಿದಾಗ, ಭೂತ ಮತ್ತು ವರ್ತಮಾನದ ಹೊಂದಾಣಿಕೆ ಅಸಾಧ್ಯವಾದಾಗ, ಹೊಸತಿನ ವ್ಯಾಮೋಹ ಹೆಚ್ಚಾದಾಗ ಹಿಂದಿನ ಮೌಲ್ಯಗಳನ್ನು ಮತ್ತು ಸಂಬಂದಗಳನ್ನು ಕಡೆಗಣಿಸಿ ವರ್ತಮಾನದ ಬದುಕಿನ ಯಾಂತ್ರಿಕ ಜೀವನಕ್ಕಷ್ಟೇ ಹೊಂದಿಕೊಂಡು ಬದುಕುತ್ತಾ ಇಂದಿನ ಮತ್ತು ಹಿಂದಿನ ತಲೆಮಾರಿನ ನಡುವಿನ ಕೊಂಡಿ ಬೆಸುಗೆ ಬಿಟ್ಟಾಗ ಹಿರಿಯರು ಮತ್ತು ಕಿರಿಯರ ನಡುವೆ ಅಸಮತೋಲನ ಏರ್ಪಟ್ಟಾಗ ಸಂವಹನದ ಕೊರತೆ ಕಂಡುಬಂದಾಗ ಹುಟ್ಟಿದ ಆಧುನಿಕ ಪದವೇ ಜನರೇಷನ್ ಗ್ಯಾಪ್.

ಹುಟ್ಟಿದ ಮಗುವಿನ ಸ್ಪರ್ಶ ಹಿರಿ ಜೀವಗಳ ತ್ವಚೆಯಿಂದ ನವಿರಾಗಿ ಆರಂಭವಾಗಿ ಹಳೆಯ ಬೇರಿನಿಂದ ಹೊಸ ಚಿಗುರಿನ ಪೋಷಣೆ ದೊರಕಿ ಪುಟ್ಟಿದೆದ್ದು ತಂದೆ ತಾಯಿ ಅಜ್ಜ, ಅಜ್ಜಿ,ಮುತ್ತಜ್ಜ,ಮುತ್ತಜ್ಜಿಯರ ಆರೈಕೆಯಲ್ಲಿ ಸಲಹಿಕೊಳ್ಳುತ್ತ ಮನಸ್ಸು ದೇಹ ಪಕ್ವಗೊಂಡಂತೆ ಹಳೆಯದನ್ನು ಸ್ವೀಕರಿಸಿ ಹೊಸತನ್ನು ಅಸ್ವಾದಿಸುತ್ತ ಹೊಂದಾಣಿಕೆಯಲ್ಲಿ ಸಮತೋಲನದ ಜೀವಿಸುವಿಕೆ ಏರ್ಪಟ್ಟಾಗ ಈ ಜನರೇಷನ್ ಗ್ಯಾಪ್ ಎನ್ನುವ ಪದ ಜನರೇಷನ್ ಲಿಂಕ್ ಆಗಿ ಬದಲಾಗುತ್ತದೆ.

ಕಿರಿಹಿರಿಯರ ಕೂಡುವಿಕೆಯಿಂದ ಮನಸ್ಸುಗಳ ಅಂತರ ಕಡಿಮೆಯಾಗಿ ಭಾವನಾತ್ಮಕ ಬಲ ಹಿಗ್ಗುವುದರ ಜೊತೆ ಜೀವನಕ್ಕೊಂದು ಭದ್ರ ನೆಲೆಗಟ್ಟನ್ನು ಒದಗಿಸಿಕೊಡುತ್ತದೆ. ಆದರೆ ಇಂದಿನ ಕಾಲಘಟ್ಟದಲ್ಲಿ ಪೋಷಕರು ಮತ್ತು ಮಕ್ಕಳ ನಡುವಿನ ಹೊಂದಾಣಿಕೆ ಮತ್ತು ಸಾಮರಸ್ಯ ದೊಡ್ಡ ಸವಾಲಿನ ವಿಷಯವಾಗಿದೆ ಇಂದಿನ ಜಗತ್ತು ಡಿಜಿಟಲ್ ಯುಗವಾಗಿ ಸೋಸಿಯಲ್ ಮೀಡಿಯಾ ಮತ್ತು ಮೊಬೈಲ್ ಗಳು ಹಿರಿಯರ ಒಡನಾಟವನ್ನು ಇನ್ನಿಲ್ಲದಂತೆ ಕಿರಿಯರಿಂದ ಕಸಿದುಕೊಂಡಿದೆ. ಮುಖ ನೋಡಿ ಮಾತುಗಳನ್ನು ಆಡುವ ಪ್ರಮೇಯವೇ ಮಾಯವಾಗಿ ಹೋಗಿದೆ. ಅಷ್ಟೆ ಯಾಕೆ ಮಕ್ಕಳ ಮೇಲಿನ ಪೋಷಕರ ಅತಿಯಾದ ನಿರೀಕ್ಷೆ, ಸ್ವಾರ್ಥ ಮನೋಭಾವ ಅಹಮ್ಮಿನ ಪ್ರತಿಷ್ಠೆ ಇದರಿಂದ ತಾವುಗಳೇ ತಮ್ಮಿಂದ ತಮ್ಮ ಮಕ್ಕಳನ್ನು ದೂರ ಇಡುವಂತೆ ಮಾಡುತ್ತಿದೆ. ಹೊಂದಾಣಿಕೆಯ ಮಾರ್ಗಗಳನ್ನು ಪೋಷಕರು ಮುಚ್ಚಿಹಾಕಿದಾಗ ಮಕ್ಕಳು ಸ್ವೇಚ್ಛೆಯಾಗಿ ತಮಗಿಷ್ಟ ಬಂದಂತೆ ಬದುಕುವುದನ್ನೆ ಸ್ವಾತಂತ್ರ್ಯ ಎಂದು ಪರಿಗಣಿಸಿ ಅದೇ ನಿಜವಾದ ಬದುಕು ಎಂದು ಅರಿತು ತಮ್ಮದೇ ಆದ ಸಣ್ಣ ಚೌಕಟ್ಟುಗಳನ್ನು ಹಾಕಿ ಕೊನೆಗೆ ಭಾವನೆಗಳೇ ಇಲ್ಲದ ಯಂತ್ರದಂತೆ ಜೀವಿಸುವ ಪರಿ ಇಂದಿನ ಶೋಚನೀಯ ದುಃಸ್ಥಿತಿ ಆಗಿದೆ. ಇದು ಮುಂದಿನ ಪೀಳಿಗೆಗೆ ಹೋದಂತೆ ದೊಡ್ಡ ಅವಘಡಗಳನ್ನು ಸೃಷ್ಟಿಸುತ್ತದೆ ಮಾನವ ಕಂದರವನ್ನು ಮತ್ತಷ್ಟು ಆಳವಾಗಿಸುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಜನರೇಷನ್ ಗ್ಯಾಪ್ ಸಡಿಲ ಗೊಳಿಸಬೇಕೆಂದರೆ ಹಳೆಯ ಮತ್ತು ಹೊಸತರ ಸಮನ್ವಯ ನಡೆಯಬೇಕಿದೆ, ಹಿರಿಯರು ಮತ್ತು ಸಾಂಪ್ರದಾಯಿಕ ಅಲೋಚನೆಗಳು ಬದಲಾಗಬೇಕಿದೆ ಹಿರಿಯರು ಬದಲಾವಣೆಯ ಗಾಳಿಗೆ ಒಗ್ಗಿಕೊಳ್ಳಬೇಕಿದೆ, ಒಪ್ಪಿಕೊಳ್ಳಬೇಕಿದೆ ಹಾಗೂ ಅಲೋಚನೆಯನ್ನು ವಿಸ್ತರಿಸಿಕೊಳ್ಳಬೇಕಿದೆ ಮತ್ತು ಶರಣಾಗಬೇಕಿದೆ. ಹಾಗೆಯೇ ಪೋಷಕರು ತಮ್ಮ ಆಲೋಚನೆಗಳನ್ನು ಮಕ್ಕಳಲ್ಲಿ ಹೇರುವ ಬದಲು ತಾವು ನಡೆದ ದಾರಿಯಲ್ಲೇ ಮಕ್ಕಳು ಮೊಮ್ಮಕ್ಕಳು ನಡೆಯಬೇಕು ಎನ್ನುವ ಧೋರಣೆಯನ್ನು ಬಿಟ್ಟು ಹೊಸತರದ ಅನುಭವಗಳಿಗೆ ಹೊಸ ಪ್ರಯೋಗಗಳಿಗೆ ಮನಸ್ಸನ್ನು ತೆರೆಯಬೇಕಿದೆ ಮತ್ತು ಹಿಂದಿನದನ್ನು ಇಂದಿನ ವಾತಾವರಣದ ಜೊತೆ ವಿಲೀನಗೊಳಿಸಬೇಕಿದೆ. ಡಿಜಿಟಲ್ ಮತ್ತು ನೆಟವರ್ಕ್ ನಿಂದ ಕೈಯಲ್ಲಿಯೇ ಜಗ ನೋಡುವ ಇಂದಿನ ಕಾಲಘಟ್ಟದಲ್ಲಿ ಅನುಕೂಲತೆಗಳು, ಉದ್ಯೋಗ, ಜೀವನಶೈಲಿ ಎಲ್ಲವೂ ಆದಲು ಬದಲಾಗಿದ್ದರು ಹಿರಿಯರ ಅನುಭವಗಳು ಹೊಸತಿನ ಆವಿಷ್ಕಾರಕ್ಕೆ ಕಾರಣವಾಗಿರುತ್ತದೆ ಅದಕ್ಕಾಗಿ ಹಿರಿಯರ ಅಲೋಚನೆಗಳ ಹಿಂದಿನ ಉತ್ತಮ ಉದ್ದೇಶಗಳನ್ನು ಓರಗೆ ಹಚ್ಚಿ ಅದರಿಂದ ಆಗುವ ಅನುಕೂಲವನ್ನು ಉಪಯೋಗಿಸಿಕೊಂಡು ಹಳೆಯ ಹೊಸತಿನ ಸಮನ್ವಯತೆಯಲ್ಲಿ ಹಿರಿಯರ ಕಿರಿಯರ ಕೊಂಡಿ ಗಟ್ಟಿಮಾಡಿಕೊಂಡು ಬದುಕನ್ನು ಹಸನುಗೊಳಿಸುವಲ್ಲಿ ಶ್ರಮಿಸಬೇಕಿದೆ. ಬದುಕಿಗಾಗಿ ಊರನ್ನು ಬಿಟ್ಟು ಪೇಟೆಯತ್ತ ಹೊರಳಿ ಅಲ್ಲಿಯೇ ಜೀವನದ ನೆಲೆಯನ್ನು ಕಂಡುಕೊಂಡು ಚಿಕ್ಕ ಕುಟುಂಬದ ಕಲ್ಪನೆಯೊಂದಿಗೆ ಬದುಕುತ್ತಾ ತಮ್ಮ ಹಿರಿಯರ ಮನೆ ಬದುಕು ಸಂಪ್ರದಾಯಗಳನ್ನು ಬದಿಗೊತ್ತಿ ಎರಡು ಮೂರು ವರುಷಕ್ಕೊಮ್ಮೆ ಹುಟ್ಟಿ ಬೆಳೆದ ಊರಿಗೆ ಹೋಗಿ ಮುಖ ತೋರಿಸಿಕೊಂಡು ಬೇಕಾದ ಸವಲತ್ತುಗಳನ್ನು ಒದಗಿಸಿಬಿಟ್ಟರೆ ಕರ್ತವ್ಯ ಮುಗಿಯಿತು ಎಂದು ಕೈತೊಳೆದುಕೊಳ್ಳುವ ಬದಲಾಗಿ ಒಂದಷ್ಟು ದಿನ ತಮ್ಮ ಮಕ್ಕಳನ್ನು ಹಿರಿಯರೊಂದಿಗೆ ಬೆರೆತು ಬದುಕಲು ಅವಕಾಶ ಕೊಟ್ಟು ಪೋಷಕರನ್ನು ಸಾಧ್ಯವಾದಲ್ಲಿ ತಮ್ಮೊಂದಿಗೆ ಒಟ್ಟಾಗಿ ಬಾಳುವ ಮನೋಭಾವನೆಯ ಆಶಯಗಳ ಮನಸ್ಸು ಮಾಡಿದ್ದೆ ಆದಲ್ಲಿ ಖಂಡಿತ ಜನರೇಷನ್ ಗ್ಯಾಪ್ ಎನ್ನುವ ಪದ ಶಬ್ದ ಕೋಶದಲ್ಲಿ ಇಣುಕಿಯೂ ನೋಡದ ಹಾಗೆ ಮಾಡಬಹುದು ಅಲ್ಲವೇ.



# ಜೇಷ್ಟಾ ಗೌರಿಯ ಹಬ್ಬ



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.



ಜೇಷ್ಟಾ ಗೌರಿಯನ್ನು ಅಷ್ಟಮಿ ಗೌರಿಯಂದೂ ಕರೆಯುವರು. ಭಾದ್ರಪದ ಮಾಸದ ಶುಕ್ಲಪಕ್ಷ ಅಷ್ಟಮಿಯಂದು ಪೂಜಿಸುವ ಹಬ್ಬ ಇದಾಗಿದೆ.

ಪೌರಾಣಿಕ ಹಿನ್ನೆಲೆ- ಕೈಲಾಸದಲ್ಲಿ ಪಾರ್ವತಿಯು ಒಮ್ಮೆ ಪತಿಯಾದ ಶಿವನಿಗೆ ಜನರಿಗೆ,ಸ್ತ್ರೀಯರಿಗೆ ಸೌಭಾಗ್ಯ,ಸಂಪತ್ತು,ಇಸ್ಟಕಾರ್ಯ ಈಡೇರಿಸುವ ಒಂದು ವ್ರತ ಕೇಳುತ್ತಾಳೆ. ಶಂಕರನು ಮುಗಳ್ನಗುತ್ತಾ ಹೇ! ಪಾರ್ವತಿಯೇ ಜೇಷ್ಟಾದೇವಿಯ ವೃತವೊಂದಿದೆ. ಆ ವ್ರತ ಸುಹಾಸಿನಿಯರು ಮಾಡಿದರೆ ಮುಕ್ತಿಯನ್ನು ಕೊಡುವದಲ್ಲದೇ ಸ್ತ್ರೀ ಸುಖವನ್ನು ಹೊಂದುವಳು. ಎಂದು ಹೇಳಿದಾಗ ಪಾರ್ವತಿಯು ವೃತದ ನಿಯಮ ಕೇಳುತ್ತಾಳೆ.ಈ ವೃತ ಮಾಡಬೇಕಾದರೆ ಮುನಿಗಳು ಇರುವ ಸ್ಥಾನಕ್ಕೆ ಹೋಗಿ ಆಚರಿಸಿದರೆ ಶ್ರೇಷ್ಟವೆಂದು ಶಿವನು ಹೇಳುತ್ತಾನೆ.ಅದರಂತೆ ಪಾರ್ವತಿ ಕೈಲಾಸದಿಂದ ಧರೆಗೆ ಬಂದು ಗಂಗಾನದಿಯ ತೀರದಲ್ಲಿದ್ದ ಋಷಿಗಳ ಆಶ್ರಮಕ್ಕೆ ಬಂದು ಋಷಿಗಳ ಮುಂದೆ ಶಿವನು ಹೇಳಿದ ಎಲ್ಲ ವಿಷಯ ಹೇಳುತ್ತಾಳೆ.ಆಗ ಋಷಿಗಳು ಜೇಷ್ಟಾಗೌರಿಯ ವಿಧಿವಿಧಾನ ಹೇಳುತ್ತಾರೆ. ವರ್ಷಾಗಾರದಲ್ಲಿ ಬರುವ ಭಾದ್ರಪದಮಾಸದ ಶುಕ್ಲಪಕ್ಷ ಜೇಷ್ಟಾ ನಕ್ಷತ್ರದಂದು ಈ ವೃತ ಮಾಡಬೇಕು. ಅಸ್ಟಮಿಯಂದು ಜೇಷ್ಟಾ ನಕ್ಷತ್ರ ಪ್ರಪ್ತವಾದರೆ ಒಳ್ಳೆಯದಲ್ಲವೆಂದು ಎರಡನೇಯ ದಿನದ ಸೂರ್ಯೋದಯದಿಂದ ಮಧ್ಯಾನ್ನದವರೆಗೆ ಇದ್ದರೆ ಅಂದು ಮಾಡಬೇಕು.ಅನುರಾಧಾ ನಕ್ಷತ್ರದ ಮೇಲೆ ಆಹ್ವಾಹನ ಮಾಡಿ ಪೂಜಿಸಬೇಕು.ಮೂಲಾ ನಕ್ಷತ್ರದ ಮೇಲೆ ಜೇಷ್ಟಾ ಗೌರಿಗೆ ನೇವೈದ್ಯ ತೋರಿಸಿ ವಿಸರ್ಜಿಸಬೇಕು.

ಪೂಜೆಯ ವಿವರ- ಮುತ್ತೈದೆಯರಿಗೆ ಅಸ್ಟಸೌಭಾಗ್ಯ ನೀಡಲು ಸಾಕ್ಷಾತ್ ಶಿವನ ಪತ್ನಿ ಗೌರಿಯು ಭೂಲೋಕಕ್ಕೆ ಬರುವದಿನವೇ ಭಾದ್ರಪದ ಮಾಸದ ಅಸ್ಟಮಿ ತಿಥಿ .ಭಾದ್ರಪದ ಮಾಸವೆಂದರೆ ಶಿವನ ಪರಿವಾರವೇ ಭೂಲೋಕಕ್ಕೆ ಬಂದು ಪೂಜೆಗೊಳ್ಳುವ ಮಾಸ.ಚತುರ್ಥಿಯೆಂದರೆ ಗಣೇಶನ ಪೂಜೆ,ಅಸ್ಟಮಿಯಂದು ಗೌರೀ ಪೂಜೆ.

ಉತ್ತರ ಕರ್ನಾಟಕದಲ್ಲಿ ಗೌರಿಪೂಜೆ ವಿಶೇಷ ಹಾಗೂ ವಿಭಿನ್ನವಾದುದು.ಮೂರು ದಿನಗಳ ಕಾಲ ಹಬ್ಬ ಆಚರಿಸಲಾಗುತ್ತದೆ. ಅಸ್ಟಮಿ ಅನುರಾಧಾ ನಕ್ಷತ್ರದಂದು ಗೌರಿಯನ್ನು ಆಹ್ವಾನಿಸಿ ,ಎರಡನೇಯ ದಿನ ಜೇಷ್ಟಾಗೌರಿಯ ಪೂಜೆ ನಡೆಯುತ್ತದೆ.ಹೊಸ ಮಣ್ಣಿನ ಮಡಕೆ,ತಾಮ್ರ,ಹಿತ್ತಾಳೆ,ಇಲ್ಲ ಬೆಳ್ಳಿ ತೊಂಬಿಗೆಗೆ ಅಲಂಕಾರ ಮಾಡಿ ಅರಿ ಷಿಣ,ಕುಂಕುಮ,ಪುಷ್ಪ,ಗೆಜ್ಜೇವಸ್ತ್ರದಿಂದ ಗೌರಿಯನ್ನು ಪೂಜಿಸಿ ಪ್ರೀಯವಾದ ಹೆ ೞಳಿಗೆ,ಕಡಬು,ಚಕ್ಕುಲಿ,ಕೋಡಬಳೆ, ಪಾಯಸ,ಚಿತ್ರಾನ್ನ,ಕೋಸಂಬರಿ ಹೀಗೆ ತರಹ ತರಹದ ಮೃಷ್ಟಾನ್ನ ಮಾಡಿ ನೇವೃದ್ಯ ಮಾಡುತ್ತಾರೆ.

ಗೌರಿಹೊಟ್ಟೆ ಅಂದರೆ ಒಳಗಡೆ ಎಲೆ,ಅಡಿಕೆ,ದಕ್ಷಿಣೆ,ಹೊಸಹತ್ತಿಯಿಂದ ನೂಲು ತೆಗೆದು ದಾರಗಳನ್ನು ಎಳೆಯ ಲೆಕ್ಕದಲ್ಲಿ ಇಡುತ್ತಾರೆ.ಬಂಧುಬಾಂಧವರೊಂದಿಗೆ ಸಂಭ್ರಮದಿಂದ ಹಬ್ಬ ಆಚರಿಸುತ್ತಾರೆ.

ಮೂರನೇಯ ದಿನ ಮೂಲಾ ನಕ್ಷತ್ರದಂದು ನಿಸರ್ಗಪ್ರೀಯಳಾದ ಗೌರಿಯನ್ನು ವಿಸರ್ಜಿಸಿ ಗೌರಿಯ ಒಳಗಿದ್ದ ನೂಲನ್ನು ತೆಗೆದು ಎಳೆಯ ಲೆಕ್ಕದಂತೆ ತಯಾರಿಸಿ ಗೌರಿಯ ಕಥೆ ಓದಿ ನೂಲಿಗೆ ಗರಿಕೆ, ಹೂವು, ವಿಳೇದೆಲೆ,ಮಾವು,ಅರಿಷಿಣ,ರೇಶ್ಮೆ,ಸಂಪಿಗೆ ಹೂಗಳಿಂದ ನೂಲಿಗೆ ಅಥವಾ ಎಳೆಗೆ ಕಟ್ಟಿ ಅಂದು ಕಟ್ಟಿಕೊಳ್ಳುತ್ತಾರೆ. ಈ ಹೊಸ ನೂಲಿಗೆ ಅಸ್ಟಮಿ ದಾರವೆಂದು ಕರೆಯುತ್ತಾರೆ. ಅಂದು ದೇವಿಗೆ ನಮಸ್ಕರಿಸಿ ಸೌಭಾಗ್ಯ ನೀಡೆಂದು ಬೇಡಿಕೊಳ್ಳುತ್ತಾರೆ.

# ಉಸಿರೇ ನೆಮ್ಮದಿಯ ಮಂತ್ರ



ಒತ್ತಡದ ಅಲೆ ಅಪ್ಪಳಿಸಿದಾಗ ಎದೆಗೂಡು ನಡುಗುತ್ತದೆ. ಆಗ ನಮಗೆ ಬೇಕಿರುವುದು ಉಪದೇಶವಲ್ಲ, ಒಂದು ಆಳವಾದ ಉಸಿರು. ಮೂಗಿನಿಂದ ನಿಧಾನವಾಗಿ ಎಳೆದು, ತುಟಿ ಕಿರಿದು ಮಾಡಿ ನಿಧಾನಕ್ಕೆ ಹೊರಬಿಡಿ. ಹೀಗೆ ಹತ್ತು ಬಾರಿ ಮಾಡಿದರೆ ಭಾರ ಇಳಿಯುತ್ತದೆ. ಅಂಗೈಯನ್ನು ಹೊಟ್ಟೆಯ ಮೇಲಿಟ್ಟು ಉಸಿರಾಡಿದಾಗ ಏರಿಳಿತವನ್ನು ಗಮನಿಸಿ. ಇದು ಕಾರ್ಟಿಸಾಲ್ ಹಾರ್ಮೋನ್ ಕಡಿಮೆ ಮಾಡುತ್ತದೆ ಎನ್ನುತ್ತಾರೆ ವೈದ್ಯರು. ಪಾದ ಭೂಮಿಗೆ ತಾಗಿದ ಸ್ಪರ್ಶವನ್ನು ಕಣ್ಣುಮುಚ್ಚಿ ಅನುಭವಿಸಿದರೆ ಚದುರಿದ ಮನಸ್ಸು ಒಂದೆಡೆ ನಿಲ್ಲುತ್ತದೆ. ಶಾಂತ ವ್ಯಕ್ತಿ ಇರುವ ಮನೆಯಲ್ಲಿ ನಗುವಿಗೆ ಬರವಿಲ್ಲ. ಅಪ್ಪ-ಅಮ್ಮ ತಾಳ್ಮೆಯಿಂದ ಮಾತನಾಡಿದರೆ ಮಕ್ಕಳ ಏಕಾಗ್ರತೆ ಹೆಚ್ಚುತ್ತದೆ. ಕಚೇರಿಯಲ್ಲಿ ರೇಗುವ ಬದಲು ಒಂದು ಲೋಟ ನೀರು ಕುಡಿದು ಮಾತನಾಡಿದರೆ ಸಮಸ್ಯೆ ಬೇಗ ಬಗೆಹರಿಯುತ್ತದೆ. ನೆರೆಮನೆಯವರಿಗೆ ಧೈರ್ಯವಾಗಿರಿ ಎಂದು ಹೆಗಲು ಕೊಟ್ಟರೆ ಇಡೀ ಓಣಿಗೆ ಸಮಾಧಾನ. ಮನಸ್ಸು ತಣ್ಣಗಾದಷ್ಟೂ ಊರಿನ ಕಿರಿಕಿರಿ ಕಡಿಮೆಯಾಗಿ ಆರೋಗ್ಯಕರ ಸಮಾಜ ಕಟ್ಟುತ್ತದೆ. ಅಚಲತೆಗೆ ದಿನಚರಿಯೇ ಔಷಧ. ಬೆಳಗ್ಗೆ ಐದು ನಿಮಿಷ ಪಕ್ಷಿಗಳ ಚಿಲಿಪಿಲಿ ಆಲಿಸಿ. ಗಂಟೆಗೊಮ್ಮೆ ಎದ್ದು ಮೈಮುರಿದು ನೀರು ಕುಡಿಯಿರಿ. ಊಟದ ವೇಳೆ ಫೋನ್ ದೂರವಿಟ್ಟು ತುತ್ತಿನ ರುಚಿ ಅನುಭವಿಸಿ. ರಾತ್ರಿ ಒಂದು ಒಳ್ಳೆಯ ನೆನಪು ನೆನೆದು ನಕ್ಕು ಮಲಗಿ. ವಾರಕ್ಕೊಮ್ಮೆ ಮಣ್ಣಿನಲ್ಲಿ ಬರಿಗಾಲಲ್ಲಿ ನಡೆಯಿರಿ.

ದೋಣಿಯ ಹಾಯಿ ಬಿಗಿದರೆ ಮುಳುಗುತ್ತದೆ, ಸಡಿಲಗೊಳಿಸಿದರೆ ಪಯಣ ಸುಗಮ. ಹಾಗೆಯೇ ಒತ್ತಡದಲ್ಲಿ ಮನಸ್ಸನ್ನು ಸಡಿಲಗೊಳಿಸಿ. ತಾಳ್ಮೆಯೇ ನಿಜವಾದ ಬಲ. ಅಚಲ ಮನಸ್ಸು ಸಿಕ್ಕರೆ ಕಷ್ಟದಲ್ಲೂ ಹಬ್ಬದ ಸಂಭ್ರಮ.

ಅಂಕಣ-23
ಸಾವು ಸಂಕಟಪಡುವ ಸಂಗತಿಗಳು..!



| ಡಾ.ಸುಧಾಕರ.ಜಿ.ಲಕ್ಕವಳ್ಳಿ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,